بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 04

ಸಂಚಿಕೆ: 17

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**27 ಏಪ್ರೆಲ್ 2023, 27 ಶಹಾದತ್ 1402 ಹಿಜರಿ ಶಮ್‌ಸಿ,**
**06 ಶವ್ವಾಲ್ 1444 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ (سورۃ البقرۃ آیت 185)

**(ಅಲ್–ಬಖರ: 185)**

ಅಂದರೆ: (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸೆಹ್ರಿ ತಿನ್ನುವುದರಲ್ಲಿ ಅನುಗ್ರಹವಿದೆ

**(1923)** ಹಝ್‌ರತ್ ಅನಸ್ ಬಿನ್ ಮಲಿಕ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಸೆಹ್ರಿಯನ್ನು ತಿನ್ನಿರಿ ಏಕೆಂದರೆ ಸೆಹ್ರಿ ಅನುಗ್ರಹಿಸಲ್ಪಟ್ಟಿದೆ.

### ತಪ್ಪಿ ತಿಂದು ಕುಡಿದವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು

**(1933)** ಹಝ್‌ರತ್ ಅಬುಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಒಬ್ಬ ವ್ಯಕ್ತಿಯು ಉಪವಾಸದಲ್ಲಿ ತಪ್ಪಾಗಿ ತಿಂದರೆ ಅಥವ ಕುಡಿದರೆ, ಅವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು ಏಕೆಂದರೆ ಅಲ್ಲಾಹನು ಅವನಿಗೆ ತಿನ್ನಿಸಿರುವುದು ಮತ್ತು ಕುಡಿಸಿರುವುದು.

### ಪ್ರಯಾಣದಲ್ಲಿ ಉಪವಾಸವು ಪುಣ್ಯವಲ್ಲ

**(1946)** ಹಝ್‌ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಪ್ರವಾದಿ ಮುಹಮ್ಮದ್(ಸ) ಪ್ರಯಾಣದಲ್ಲಿದ್ದಾಗ ಒಂದು ಜನಜಂಗುಳಿಯನ್ನು ಮತ್ತು ಒಬ್ಬ ವ್ಯಕ್ತಿಯನ್ನು ನೋಡಿದರು. ಅವರು ಹೇಳಿದರು: ಇದು ಏನು? ಅದಕ್ಕೆ ಜನರು ಹೇಳಿದರು: ಓರ್ವ ಉಪವಾಸಿಗನಾಗಿದ್ದಾನೆ ಅದಕ್ಕೆ ಅವರು ಹೇಳಿದರು: ಪ್ರಯಾಣ ಮಾಡುವಾಗ ಉಪವಾಸದಿಂದ ಯಾವುದೇ ಪ್ರಯೋಜನವಿಲ್ಲ.

### ರಮಝಾನ್‌ನ ಬಿಟ್ಟು ಹೋಗಿರುವ ಉಪವಾಸಗಳು

**(1950)** ಅಬು ಸಲ್ಮ ಅವರಿಂದ ವರದಿಯಾಗಿದೆ: ಅವರು ಹೇಳಿದರು: ಹಝ್‌ರತ್ ಆಯಿಶಾ(ರ) ಹೇಳುವುದನ್ನು ನಾನು ಕೇಳಿದ್ದೇನೆ: ರಮಝಾನ್ ಉಪವಾಸವು ನನ್ನ ಮೇಲೆ ಕಡ್ಡಾಯವಾದಾಗ ನಾನು ಅವುಗಳನ್ನು ಪೂರ್ಣಗೊಳಿಸದಿದ್ದರೆ ನಾನು ಅವುಗಳನ್ನು ಶಾಅ್‌ಬಾನ್ ಮಾಸದಲ್ಲಿ ಪೂರೈಸುತ್ತಿದ್ದೆ. ಯಾಹ್ಯಾ ಹೇಳಿದರು: ಪ್ರವಾದಿ(ಸ) ರವರ ಕಾರ್ಯಮಗ್ನತೆಯಿಂದಾಗಿ ಅಥವಾ ಅವರು ಪ್ರವಾದಿ(ಸ) ಅವರ ಸೇವೆಯಲ್ಲಿ ನಿರತರಾಗಿದ್ದರಿಂದ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

## ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ. ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದೊಂದು ಸೂಕ್ಷ್ಮ ವಿಷಯವಾಗಿದೆ ಓರ್ವ ವ್ಯಕ್ತಿಯು (ಅವನ ಸೋಮಾರಿತನದಿಂದಾಗಿ) ಉಪವಾಸವು ಕಠಿಣವಾಗಿದ್ದರೆ ಮತ್ತು ಅವನು ತನ್ನ ಮನಸ್ಸಿನಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ, ನಾನು ಒಂದು ಸಮಯದಲ್ಲಿ ತಿನ್ನದಿದ್ದರೆ ನನ್ನ ಆರೋಗ್ಯದಲ್ಲಿ ತೊಂದರೆಗಳನ್ನು ಉಂಟಾಗಬಹುದು ಎಂದು ಭಾವಿಸಿದರೆ ಅಂತಹ ವ್ಯಕ್ತಿಯು ಅಲ್ಲಾಹನ ಅನುಗ್ರಹವನ್ನು ಸ್ವತಃ ತನ್ನ ಮೇಲೆ ಕಠಿಣವಾಗಿರಿಸುವವನು. ಅವನು ಹೇಗೆ ಅಲ್ಲಾಹನ ಅನುಗ್ರಹವನ್ನು ಪಡೆಯುತ್ತಾನೆ. ಹಾಂ! ಯಾರು ತನ್ನ ಮನಸ್ಸಿನಲ್ಲಿ ರಮಝಾನ್‌ನ ಆಗಮನದ ಕುರಿತು ಸಂತೋಷಗೊಳ್ಳುತ್ತಾನೊ ಆತನು ರಮಝಾನ್‌ನ ಪವಿತ್ರ ಮಾಸ ಯಾವಾಗ ಬರುವುದೊ, ಯಾವಾಗ ಉಪವಾಸಗಳನ್ನು ಅನುಷ್ಠಿಸುವುದೊ ಮತ್ತು ಆತನು ತನ್ನ ಅನಾರೋಗ್ಯದಿಂದಾಗಿ ಉಪವಾಸಗಳನ್ನು ಅನುಷ್ಠಿಸದಿದ್ದರೆ ಆತನ ಆಕಾಶದಲ್ಲಿ ಉಪವಾಸಗಳಿಂದ ವಂಚಿತನಾಗಿರುವುದಿಲ್ಲ. ಈ ಲೋಕದಲ್ಲಿ ಅನೇಕ ಜನರು ನೆಪಗಳನ್ನು ಮಾಡುವವರಾಗಿದ್ದರೆ ಅವರು ಯೋಚಿಸುವುದೇನೆಂದರೆ ನಾವು ಹೇಗೆ ಲೋಕದ ಜನರನ್ನು ಮೋಸಗೊಳಿಸುತ್ತೇವೊ ಹಾಗೆಯೇ ಅಲ್ಲಾಹನ್ನು ಸಹ ಮೊಸಗೊಳಿಸುತ್ತೇವೆ. ನೆಪ ಮಾಡುವವರು ತಮ್ಮ ಕಡೆಯಿಂದಲೇ ಅನೇಕ ಸಮಸ್ಯೆಗಳನ್ನು ಸೃಷ್ಠಿಸಿಕೊಳ್ಳುತ್ತಾರೆ ಮತ್ತು ಅನಾನುಕೂಲಗಳನ್ನು ಸೇರಿಸಿ ಈ ಸಮಸ್ಯೆಗಳನ್ನು ಸಮರ್ಥಿಸುತ್ತಾರೆ. ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಅವು ಮಾನ್ಯವಾಗಿಲ್ಲ, ತೊಂದರೆಗಳ ವಿಷಯವು ಬಹಳ ವಿಷಾದವಾಗಿದೆ ಮನುಷ್ಯನು ಬಯಸಿದರೆ ಅವನು ತನ್ನ ಜೀವನದುದ್ದಕ್ಕೂ ಕುಳಿತು ಪ್ರಾರ್ಥಿಸುತ್ತಿದ್ದರು ಮತ್ತು ರಮಝಾನ್‌ನಲ್ಲಿ ಉಪವಾಸಗಳನ್ನು ಅನುಷ್ಠಿಸದಿದ್ದರು, ಅಲ್ಲಾಹನು ಆತನ ಉದ್ದೇಶ ಮತ್ತು ಪ್ರಾಮಾಣಿಕತೆಯನ್ನು ತಿಳಿದಿದ್ದಾನೆ, ಆತನು ಎಂತಹ ಪ್ರಾಮಾಣಿಕನಾಗಿದ್ದಾನೆ ಎಂದು. ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಅರಿವಿದೆ ಆತನ ಮನಸ್ಸಿನಲ್ಲಿ ನೋವು ಇದೆ ಮತ್ತು ಅಲ್ಲಾಹನು ಆತನಿಗೆ ಪ್ರತಿಫಲಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ ಏಕೆಂದರೆ ಹೃದಯದ ನೋವು ಅಮೂಲ್ಯವಾದ ವಸ್ತುವಾಗಿದೆ. ಮನುಷ್ಯನು ನೆಪವನ್ನು ಮಾಡುತ್ತಾನೆ ಆದರೆ ಅಲ್ಲಾಹನ ಮುಂದೆ ಈ ನೆಪಗಳು ಯವ ವಸ್ತುವಲ್ಲ. ನಾನು ಆರು ತಿಂಗಳು ಉಪವಾಸಗಳನ್ನು ಅನುಷ್ಠಿಸಿದಾಗ ಒಮ್ಮೆ ಒಂದು ಪ್ರವಾದಿಗಳ ಗುಂಪು ನನ್ನನ್ನು (ಕಾಶ್ಫ್‌ನಲ್ಲಿ) ಭೇಟಿಯಾದರು ಅವರು ಹೇಳಿದರು: ನೀನು ನಿನ್ನ ಆತ್ಮವನ್ನು ಏಕೆ ಇಷ್ಟು ಕಷ್ಟದಲ್ಲಿ ಸಿಲುಕಿಸುತ್ತೀಯ, ಅದರಿಂದ ಹೊರಬರು. ಹೀಗೆ ಮನುಷ್ಯ ತನ್ನನ್ನು ತಾನು ಅಲ್ಲಾಹನಿಗಾಗಿ ತೊಂದರೆಗಳನ್ನು ಅನುಭವಿಸಿದರೆ ಅವನು ಸ್ವತಃ ಪೋಷಕರಂತೆ ಕರುಣೆ ತೋರಿಸಿ ನೀನು ಏಕೆ ತೊಂದರೆಯಲ್ಲಿದ್ದೀಯ ಎಂದು ಕರುಣೆ ತೋರುತ್ತಾನೆ.

### ಸರ್ವಶಕ್ತನಾದ ಅಲ್ಲಾಹನ ಕರುಣೆ

ಕಷ್ಟತೆಗಳಿಂದ ಹಾಗೂ ತೊಂದರೆಗಳಿಂದ ವಂಚಿತರಾಗಿರಿಸುವ ಜನರು ಇವರೇ ಆಗಿದ್ದಾರೆ, ಆದುದರಿಂದ ಪರಮಾತ್ಮನು ಅವರನ್ನು ಬೇರೆ ಕಷ್ಟಗಳಿಗೆ ಸಿಲುಕಿಸಿ ಹೊರತೆಗೆಯದೆ ತಾವೇ ಕಷ್ಟದಲ್ಲಿರುವ ಇತರರನ್ನು ಹೊರತೆಗೆಯುತ್ತಾನೆ. ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ. ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ. ಬೆಂಕಿಯಲ್ಲಿ ಬೀಳಲು ಬಯಸುವ ಇಬ್ರಾಹೀಮ್(ಅ)ರ ಕಥೆಯನ್ನು ಪರಿಗಣಿಸಿ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಬೆಂಕಿಯಿಂದ ರಕ್ಷಿಸುತ್ತಾನೆ ಮತ್ತು ಯಾರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೊ ಅವರಿಗೆ ಬೆಂಕಿಗೆ ಎಸೆಯಲಾಗುತ್ತದೆ.

**(ಮಲ್‌ಫೂಝಾತ್, ಸಂಪುಟ–2, ಪುಟ–564, ಖಾದಿಯನ್ 2003)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

# ಖುತ್‌ಬ ಈದುಲ್ ಫಿತರ್

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-05-2022** ರಂದು ನೀಡಿದ **ಖುತ್‌ಬ ಈದುಲ್ ಫಿತರ್** (ಸಾರಾಂಶ)

(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು: **ವಅ್‌ಬುದುಲ್ಲಾಹ ವಲಾ ತುಶ್ರಿಕೂ ಬಿಹೀ ಶೈಅವ್ವ ಬಿಲ್‌ವಾಲಿದೈನಿ ಇಹ್ಸಾನ ವ್ವಬಿಝಿಲ್ ಖುರ್‌ಬಾ ವಲ್ ಯತಾಮಾ ವಲ್ ಮಸಾಕೀನ ಅಲ್ ಜಾರಿ ಝಿಲ್‌ಖುರ್‌ಬಾ ವಲ್‌ಜಾರಿಲ್ ಜುನುಬಿ ವಸ್ಸಾಹೊಬಿ ವಬ್ನಿಸ್ಸಬೀಲ. ವಮಾ ಮಲಕತ್ ಅಯ್‌ಮಾನುಕುಮ್, ಇನ್ನಲ್ಲಾಹ ಲಾ ಯುಹಿಬ್ಬ ಮನ್ ಕಾನ ಮುಖ್ತಾಲನ್ ಫಖೂರ**

ನೀವು ಅಲ್ಲಾಹನನ್ನು ಆರಾಧಿಸಿರಿ; ಬೇರೇನನ್ನೂ ಅವನ ಸಹಭಾಗಿಗಳನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವರಿಗೂ ಅನ್ಯ ನೆರೆಹೊರೆಯವರಿಗೂ ನಿಕಟ ಸಂಗಡಿಗರಿಗೂ ಯಾತ್ರಿಕರಿಗೂ ನಿಮ್ಮ ಅಧೀನದಲ್ಲಿರುವವರಿಗೂ (ಒಳಿತನ್ನು ಮಾಡಿರಿ). ಅಹಂಭಾವಿಗಳನ್ನೂ ಜಂಭ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ. (ಪವಿತ್ರ ಖುರ್‌ಆನ್ 4:37).

ಇಂದು ಈದ್ ದಿನಾಚರಣೆ ಮಾಡಲು ಅಲ್ಲಾಹನು ನಮಗೆ ಭಾಗ್ಯವನ್ನು ನೀಡಿರುವನು. ಆದರೆ ಒಬ್ಬ ಯಥಾರ್ಥ ಸತ್ಯ ವಿಶ್ವಾಸಿಗೆ ಈದ್ ಎಂದರೆ ಕೇವಲ ಇಷ್ಟು ಮಾತ್ರವಲ್ಲ: ಒಳ್ಳೆಯ ಬಟ್ಟೆ ಧರಿಸುವುದು, ಒಳ್ಳೆಯ ಆಹಾರ ತಿನ್ನುವುದು, ಸ್ನೇಹಿತರೊಂದಿಗೆ ಕುಳಿತುಕೊಂಡು ಹರಟೆ ಮಾತುಗಳನ್ನಾಡಿ ಸಮಯ ಕಳೆಯುವುದು, ಈದ್ ನಮಾಝ್ ನಿರ್ವಹಿಸಿದ ನಂತರ, ಈದ್‌ಗೆ ಸಂಬಂಧಿಸಿದ ಫರ್ಝ್ ಈಡೇರಿಸಲಾಗಿದೆ ಇನ್ನು ಮುಂದೆ ಪೂರ್ಣ ಸ್ವಾತಂತ್ರ್ಯವಿದೆ. ಇಷ್ಟವಿರುವ ಹಾಗೆ ಮಾಡಬಹುದು ಎಂದು ಯೋಚಿಸುವುದು. ಈದ್ ದಿನ ಝುಹರ್ ನಮಾಝ್ ನಿಗದಿತ ಸಮಯದಲ್ಲಿ ನಿರ್ವಹಿಸುವ ಬಗ್ಗೆ ಯೋಚನೆ ಇಲ್ಲ. ಅಸರ್ ನಮಾಝ್ ಬಗ್ಗೆಯೂ ಯೋಚನೆ ಇಲ್ಲ. ಬೇರೆ ನಮಾಝ್‌ಗಳ ಬಗ್ಗೆ ಸಹ ಯೋಚನೆ ಇಲ್ಲ. ಏನಾದರೂ ಯೋಚನೆ ಉಂಟಾದರೂ ಸಹ ಬೇಗ ಬೇಗನೆ ನಮಾಝ್‌ಗಳನ್ನು ಜಮಾಯಿಸಿ ನಿರ್ವಹಿಸುತ್ತಾರೆ. ಕೆಲವು ಜನರು ಈದ್ ನಮಾಝ್ ಸಹ ನಿರ್ವಹಿಸುವುದಿಲ್ಲ. ಕೆಲವು ಜನರು ಈದ್ ನಮಾಝುನ್ನು ನಿರ್ವಹಿಸಿದ ನಂತರ ಎದ್ದು ಈ ದಿನದ ಸಂಭ್ರಮಗಳಲ್ಲಿ ಭಾಗವಹಿಸಲು ಸಿದ್ಧರಾಗುತ್ತಾರೆ. ಅವುಗಳೇ ಈದ್ ದಿನದ ಉದ್ದೇಶ ಲಕ್ಷ್ಯಗಳಾಗಿವೆ ಎಂಬಂತೆ ವರ್ತಿಸುತ್ತಾರೆ. ನಾನು ಕೇವಲ ಬಾಯಿಮಾತಾಗಿ ಹೀಗೆ ಹೇಳುತ್ತಾ ಇಲ್ಲ. ಈದ್ ನಮಾಝ್ ನಿರ್ವಹಿಸದ ಜನರನ್ನು ನಾನು ನೋಡಿದ್ದೇನೆ. ಅವರು ಹೇಳುತ್ತಾರೆ – ನಮಗೆ ನಿದ್ರೆ ಬಂದಿತ್ತು ನಾವು ಮಲಗಿದ್ದೆವು.

ನೆನಪಿಡಬೇಕಾದ ವಿಷಯವೇನೆಂದರೆ ಈದ್ ದಿನ ಹೆಚ್ಚು ಆರಾಧನೆಗಳನ್ನು ಮಾಡುವ ದಿನವಾಗಿದೆ. ಬೇರೆ ದಿನಗಳಲ್ಲಿ ಐದು ಹೊತ್ತಿನ ನಮಾಝ್ ಫರ್ಝ್ ಆಗಿದೆ. ಆದರೆ ಈದ್ ದಿನ ಆರು ನಮಾಝ್‌ಗಳು ಫರ್ಝ್ ಆಗಿವೆ. ಎಷ್ಟರವರೆಗೆಂದರೆ, ಮಹಿಳೆಯರಿಗೆ ಕೆಲವು ದಿನಗಳಲ್ಲಿ ನಮಾಝ್ ಅನುಷ್ಠಿಸುವುದರಿಂದ ವಿನಾಯಿತಿ ನೀಡಲಾಗಿದ್ದರೂ ಅಂತಹ ಮಹಿಳೆಯರು ಸಹ ಈದ್‌ಗಾಹ್‌ಗೆ ಹೋಗಬೇಕೆಂದು ಆಜ್ಞಾಪಿಸಲಾಗಿದೆ. ಈದ್ ದಿನ ಕೇವಲ ಒಂದು ಹಬ್ಬ ಆಚರಿಸಲು ಜಮಾಯಿಸುವ ದಿನವಲ್ಲ. ಈದ್ ದಿನದಂದು, ಇತರ ದಿನಗಳಲ್ಲಿ ನಾವು ಮಾಡಬೇಕೆಂದು ಅಲ್ಲಾಹನು ಆಜ್ಞಾಪಿಸಿದ ಕೆಲಸಗಳನ್ನು ಹೆಚ್ಚು ಶ್ರದ್ಧೆಯಿಂದ ನಿರ್ವಹಿಸುವುದು ಆವಶ್ಯಕವಾಗಿದೆ. ಆರಾಧನೆಗೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಆವಶ್ಯಕತೆ ಇದೆ. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ವಹಿಸಿಕೊಡಲಾಗಿದೆ. ಆ ಹೊಣೆಗಾರಿಕೆಗಳನ್ನು ಈಡೇರಿಸುವುದು ಸಹ ಆವಶ್ಯಕವಾಗಿದೆ.

ಈ ದಿನ ನಾವು ಪ್ರತಿಜ್ಞೆ ಮಾಡಬೇಕು, ಅಲ್ಲಾಹನ ಹಕ್ಕುಗಳನ್ನು ಈಡೇರಿಸುವ ಪ್ರಯತ್ನವನ್ನು ಸ್ಥಿರವಾಗಿ ಇನ್ನು ಮುಂದೆ ಮಾಡುವೆನು. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ನಾನು ನಿರಂತರ ಪ್ರಯತ್ನಮಾಡುತ್ತಾ ಇರುವೆನು.

ಹೀಗೆ ಮಾಡುವುದಾದರೆ ನಮ್ಮ ಈದ್‌ಗಳು ನೈಜ ಈದ್‌ಗಳಾಗುವುವು. ಇಂತಹ ಈದ್‌ಗಳನ್ನು ಗಳಿಸಲು ನಾವು ಪ್ರಯತ್ನಮಾಡಬೇಕು. ಅಲ್ಲಾಹನು ಆ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅನೇಕ ಸ್ಥಳಗಳಲ್ಲಿ ನಮ್ಮ ಗಮನವನ್ನು ಹರಿಸಿದ್ದಾನೆ. ನಾವು ಇಂದು ಈದ್ ದಿನದಂದು ಆ ಹಕ್ಕುಗಳನ್ನೂ ಹೊಣೆಗಾರಿಕೆಗಳನ್ನೂ ಈಡೇರಿಸುವ ಬಗ್ಗೆ ಪ್ರತಿಜ್ಞೆ ಮಾಡಿ ನಾವು ಇನ್ನು ಮುಂದೆ ಅವುಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಬೇಕಾಗಿದೆ. ಅವುಗಳ ಬಗ್ಗೆ ನಾನು ಹಿಂದಿನ ಖುತ್‌ಬಗಳಲ್ಲಿ ಪ್ರಸ್ತಾಪಿಸುತ್ತಾ ಬಂದಿದ್ದೇನೆ. ಹೀಗೆ ನಾವು ಮಾಡುವುದಾದರೆ ನಾವು ರಮಝಾನಿನ ಉದ್ದೇಶಲಕ್ಷ್ಯಗಳನ್ನು ಗಳಿಸುವವರಾಗುವೆವು. ಮತ್ತು ಈದ್ ದಿನಾಚರಣೆಯ ಉದ್ದೇಶಲಕ್ಷ್ಯವನ್ನು ಗಳಿಸುವವರಾಗುವೆವು.

ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಕೆಲವು ಕಡ್ಡಾಯ ಕರ್ತವ್ಯಗಳ ಬಗ್ಗೆ ನಮ್ಮ ಗಮನವನ್ನು ಹರಿಯಿಸಿದ್ದಾನೆ. ಅವುಗಳನ್ನು ಈಡೇರಿಸದವರು ಅಹಂಭಾವಿಗಳೂ ಜಂಭ ಕೊಚ್ಚುವವರೂ ಆಗಿರುತ್ತಾರೆ. ಅಂತಹ ಜನರನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಅಲ್ಲಾಹನು ಯಾರನ್ನು ಇಷ್ಟಪಡುವುದಿಲ್ಲವೋ ಅವರಿಗೆ ಧರ್ಮವೂ ಇಲ್ಲ ಲೋಕವೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ತೀವ್ರವಾಗಿ ಮುನ್ನೆಚ್ಚರಿಕೆ ನೀಡುತ್ತಾ ಹೇಳಿದರು: ಅಲ್ಲಾಹನು ಅಹಂಭಾವಿಗಳನ್ನು ಸ್ವರ್ಗದಲ್ಲಿ ಪ್ರವೇಶಿಸಲು ಬಿಡಲಾರನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮನುಷ್ಯನ ಹಕ್ಕುಗಳನ್ನು ಈಡೇರಿಸಿಕೊಡದಿರುವುದು, ಜನರನ್ನು ಕೀಳೆಂದು ಭಾವಿಸುವುದು, ಜನರನ್ನು ತಿರಸ್ಕಾರ ಭಾವದಿಂದ ನೋಡುವುದು, ಅವರೊಂದಿಗೆ ಕೆಟ್ಟದಾಗಿ ವರ್ತಿಸುವುದು ಅಹಂಭಾವವಾಗಿದೆ.

ಆದರೆ ಈದ್ ದಿನ ಒಳ್ಳೆಯ ಬಟ್ಟೆ ಧರಿಸುವುದು, ಶೃಂಗಾರ ಮಾಡುವುದು, ಸುಗಂಧ ದ್ರವ್ಯ ಒರೆಸುವುದು ಮೊದಲಾದುವು ಅಲ್ಲಾಹನಿಗೆ ಇಷ್ಟಕರವಾಗಿವೆ. ಆದರೆ ಅವುಗಳನ್ನು ಅಹಂಭಾವ ಪ್ರಕಟಿಸುವ ಮಾರ್ಗಗಳನ್ನಾಗಿ ಮಾಡುವುದು ಅಲ್ಲಾಹನಿಗೆ ಇಷ್ಟಕರವಲ್ಲ.

ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶ ಅಲ್ಲಾಹನನ್ನು ಆರಾಧಿಸುವುದು ಎಂದು ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ. ಹೀಗೆ ಹೇಳಿದುದರ ಅರ್ಥ ಅಲ್ಲಾಹನಿಗೆ ನಮ್ಮ ಆರಾಧನೆಯ ಆವಶ್ಯಕತೆ ಇದೆ ಎಂದಲ್ಲ. ಆರಾಧನೆ ಮಾಡುವುದು ನಮ್ಮ ಹಿತಕ್ಕೋಸ್ಕರವಾಗಿದೆ. ಆರಾಧನೆ ನಮ್ಮನ್ನು ಕೆಡುಕುಗಳಿಂದ ತಡೆಗಟ್ಟುತ್ತದೆ. ಆದುದರಿಂದ ಆರಾಧನೆಗಳ, ನಮಾಝ್‌ಗಳ ಮತ್ತು ಅಲ್ಲಾಹನ ಸ್ಮರಣೆಯ ಲಾಭ ಸಿಗುವುದು ನಮಗೆಯೇ ಆಗಿದೆ. ಅಲ್ಲಾಹನು ಅವುಗಳಿಗೆ ಬಹಳ ಪ್ರತಿಫಲವನ್ನು ನೀಡುತ್ತಾನೆ. ಒಬ್ಬ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು: ನನ್ನನ್ನು ಸ್ವರ್ಗಕ್ಕೆ ಪ್ರವೇಶಿಸುವಂತೆ ಮಾಡುವಂತಹ ಕರ್ಮವನ್ನು ಹೇಳಿಕೊಡಿರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆರಾಧನೆ ಮಾಡು. ಜನರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸು. ಅವರ ಹಕ್ಕುಗಳನ್ನು ಈಡೇರಿಸು. ಹೀಗೆ ಮಾಡಿದರೆ ಅವು ನಿನ್ನನ್ನು ಸ್ವರ್ಗಕ್ಕೆ ಒಯ್ಯುವುವು.

ಇನ್ನೊಂದು ಹದೀಸು ವರದಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಒಬ್ಬನು ಕೇವಲ ಅಲ್ಲಾಹನಿಗೋಸ್ಕರ ಎರಡು ಈದ್‌ಗಳ ರಾತ್ರಿಗಳಲ್ಲಿ ಆರಾಧನೆ ಮಾಡುವುದಾದರೆ ಅವನ ಹೃದಯ ಶಾಶ್ವತವಾಗಿ ಜೀವಂತವಾಗಿ ಇರುವಂತೆ ಮಾಡಲಾಗುವುದು. ಇದೆಷ್ಟು ದೊಡ್ಡ ಶುಭವಾರ್ತೆಯಾಗಿದೆ. ಅಲ್ಲಾಹನಿಗೋಸ್ಕರ ಆರಾಧನೆ ಮಾಡುವುದರಿಂದ ಯಾವಾಗಲೂ ಬಹುಮಾನ ಸಿಗುತ್ತಾ ಇರುವುದು. ಆದುದರಿಂದ ಈದ್ ಎಂದರೆ ಸಂತೋಷದಿಂದ ಸಂಭ್ರಮಿಸುವುದರ ಹೆಸರಲ್ಲ. ಈದ್ ರಾತ್ರಿಗಳನ್ನು ಆರಾಧನೆಗಳಿಂದ ಜೀವಂತಗೊಳಿಸುವುದರ ಹೆಸರು ಆಗಿದೆ. ಅದರಿಂದ ಶಾಶ್ವತವಾದ ಆಧ್ಯಾತ್ಮಿಕ ಜೀವನ ಲಭಿಸುತ್ತದೆ.

ರಮಝಾನ್ ಕೊನೆಗೊಂಡಿತು ಇನ್ನು ಮುಂದೆ ಸುಖವಾಗಿ ನಿದ್ರಿಸಬಹುದು ಎಂದು ಯೋಚಿಸುವವರು ತಪ್ಪು ಮಾಡುತ್ತಿದ್ದಾರೆ. ಅವರು ಸೆಹ್ರಿ ಸಮಯ ಎದ್ದಾಗ ಎರಡು ರಕಅತ್ ನಫ್ಲ್ ನಿರ್ವಹಿಸುತ್ತಿದ್ದರು. ಆದರೆ ಈದ್ ದಿನದಂದು ಬಹಳ ಜನರು ಸುಬ್‌ಹ್ ನಮಾಝ್‌ಗೆ ಎದ್ದೇಳಲು ಉದಾಸೀನತೆ ತೋರಿಸುತ್ತಾರೆ. ಇದು ತಪ್ಪು. ರಮಝಾನ್ ನಂತರ ಆರಾಧನೆಗಳಲ್ಲಿ ಉತ್ತಮ ಸ್ಥಿತಿ ತಲೆದೋರಬೇಕಾಗಿದೆ. ಸುಬ್‌ಹ್

*(ಪುಟ ಸಂಖ್ಯೆ-08ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಧರ್ಮದ ಪುನರುತ್ಥಾನಕ್ಕಾಗಿ ಈ ಶತಮಾನದ ನೆತ್ತಿನಲ್ಲಿ ಸುಧಾರಕನೊಬ್ಬ ಬರುವವನಿದ್ದನು. ಅವನು ನಾನಾಗಿದ್ದೇನೆ. ಭೂಮಿಯಿಂದ ಮರೆಯಾದ ವಿಶ್ವಾಸವನ್ನು ಪುನ: ಸ್ಥಾಪಿಸಲು ಮತ್ತು ದೇವನಿಂದ ಶಕ್ತಿ ಪಡೆದು ಅವನ ಕೈ ಸೆಳೆತದಿಂದ ಲೋಕದ ಸುಧಾರಣೆ, ಭಯಭಕ್ತಿ ಮತ್ತು ಸದಾಚಾರದ ಕಡೆಗೆ ಕರೆ ನೀಡಲು ಮತ್ತು ಅವರ ಕುಂದಿದ ವಿಶ್ವಾಸವನ್ನು ಹಾಗೂ ತಪ್ಪು ಆಚಾರಗಳನ್ನು ದೂರ ಮಾಡಲು ಬಂದಿರುವೆನು." (ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

ಕೊನೆಯ ಕಾಲಘಟ್ಟದಲ್ಲಿ ಪ್ರಕಟಗೊಳ್ಳುವ ಮತ್ತೊಂದು ಜನತೆ ಇದೆ. ಅವರು ಕೂಡ ಆರಂಭದಲ್ಲಿ ಅಂಧಕಾರ ಮತ್ತು ದುರ್ಮಾರ್ಗದಲ್ಲಿ ಇರುವರು. ಆಗ ಅಲ್ಲಾಹನು ಅವರನ್ನು ಕೂಡ ಸಹಾಬಿಯರ ಹಾಗೆ ಮಾಡುವನು.

ಈ ಪರಿಸ್ಥಿತಿಯು ವಾಗ್ದತ್ತ ಮಸೀಹರ ಮತ್ತು ಪರ್ಶಿಯನ್ ಮೂಲದ ಕಾಲಘಟ್ಟವು ಒಂದೇ ಆಗಿದೆ ಮತ್ತು ಉದ್ದೇಶವು ಒಂದೇ ಆಗಿದೆ ಎಂದರೆ ನಂಬಿಕೆಯನ್ನು ಪುನರುತ್ಥಾನಗೊಳಿಸುವುದು. ಇದರಿಂದ ನಿಶ್ಚಿತವಾಗಿಯೂ ಸಾಬೀತಾಗುವುದು ವಾಗ್ದತ್ತ ಮಸೀಹರು ಪರ್ಶಿಯನ್ ಮೂಲದವರಾಗುವರು. ಅವರ ಜಮಾಅತಿನ ಪರವಾಗಿಯೇ ಈ ವಚನ ಬಂದಿರುವುದು **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹುಮ್**

ಎರಡನೆಯ ಗುಂಪು ಮೇಲಿನ ವಚನದ ಪ್ರಕಾರ ಸಹಾಬಿಗಳಂತಾಗಿರುವರು, ಅದು ವಾಗ್ದತ್ತ ಮಸೀಹರ ಗುಂಪಾಗಿದೆ. ಏಕೆಂದರೆ ಈ ಗುಂಪು ಸಹ ಸಹಾಬರಂತೆ ಹಝ್ರತ್ ಪೈಗಂಬರ್ (ಸ) ರವರ ದೃಷ್ಟಾಂತಗಳನ್ನು ಕಾಣುವವರಾಗುವರು. ಮತ್ತು ಅಂಧಕಾರ ಹಾಗೂ ದುಮಾರ್ಗದ ನಂತರ ಮಾರ್ಗದರ್ಶನ ಪಡೆಯುವರು. ಆಖರೀನ ಮಿನ್‌ಹುಮ್ ನಲ್ಲಿ ಈ ಗುಂಪನ್ನು ಮಿನ್‌ಹುಮ್ ಸಂಪತ್ತಿನಿಂದ ಎಂದರೆ ಸಹಾಬರಂತೆ ಆಗುವ ಅನುಗ್ರಹದಿಂದ ಪಾಲುದಾರರನ್ನಾಗುವ ಭಾಗ್ಯ ನೀಡಲಾಗಿದೆ.

ಅಲ್ಲಾಹನು ನನಗೆ ಹದಿನಾಲ್ಕನೇ ಶತಮಾನದ ಆರಂಭದಲ್ಲಿ ನಂಬಿಕೆಯನ್ನು ಜ್ಞಾನವನ್ನು ಪುನರುತ್ಥಾನಕ್ಕೆ ಕಳುಹಿಸಿರುವನು. ಅವನ ಸಹಾಯ ಮತ್ತು ಅನುಗ್ರಹ ಆಶೀರ್ವಾದಗಳಿಂದ ನನ್ನ ಪರವಾಗಿ ದೈವಿಕ ದೃಷ್ಟಾಂತಗಳು ಪ್ರಕಟಗೊಳ್ಳುತ್ತಿವೆ ಮತ್ತು ಅವನ ಇಂಗಿತ ಅನುಗ್ರಹ ಪ್ರಕಾರ ಪ್ರಾರ್ಥನೆಗಲು ಸ್ವೀಕಾರಗೊಳ್ಳುತ್ತಿವೆ.

ಇಂದು ಮುಸಲ್ಮಾನರು ಈ ವಾಸ್ತವವನ್ನು ಅರಿತುಕೊಂಡರೆ, ಯಾವ ಮಸೀಹ್ ಮಹದಿ ಆಗಮಿಸುವವರಿದ್ದರೋ, ಅವರು ಬಂದಿರುವರು. ಹಝ್ರತ್ ಪೈಗಂಬರ್(ಸ) ರವರ ನೈಜ ಪ್ರೇಮಿ ಮತ್ತು ನಿಷ್ಠಾವಂತ ಗುಲಾಮರು ಆಗಿರುವರು. ಅವರ ಬೈಅತ್ ಪಡೆಯುವುದು ಹಝ್ರತ್ ಪೈಗಂಬರ್(ಸ) ರವರ ನಿರ್ದೇಶನದ ಪ್ರಕಾರ ಅನಿವಾರ್ಯವಾಗಿರುವುದು. ಸಂಪೂರ್ಣ ನಿಷ್ಠೆಯೊಂದಿಗೆ ಅವರ ಬೈಅತ್ತಿನಲ್ಲಿ ಸೇರಿಕೊಂಡರೆ, ಮುಸಲ್ಮಾನರು ಅವರನ್ನು ನಂಬುವ ಮೂಲಕ ಲೋಕದಲ್ಲಿ ತಮ್ಮ ಉನ್ನತ ಸ್ಥಾನಮಾನ ಮನವರಿಕೆ ಮಾಡಿಕೊಡಬಹುದಾಗಿದೆ. ತನ್ಮೂಲಕ ಅಲ್ಲಾಹನ ಅನುಗ್ರಹಗಳನ್ನು ಆಶೀರ್ವಾದವನ್ನು ಪಡೆಯಬಹುದಾಗಿದೆ. ಇದೇ ಪರಿಸ್ಥಿತಿಯಿತ್ತು, ಅದೇ ಗತಿಯಾಗುವುದು. ಅಲ್ಲಾಹನು ಅವರಿಗೆ ಸದ್ಬುದ್ಧಿ ಹಾಗೂ ಅರಿವು ನೀಡಲಿ. ಇದೇ ಪರಿಸ್ಥಿತಿಯಿದ್ದರೆ, ಅದೇ ಗತಿಯಾಗುವುದು. ಅಲ್ಲಾಹನು ಅವರಿಗೆ ಸಧ್ಬುದ್ಧಿ ಹಾಗೂ ಅರಿವು ನೀಡಲಿ.

ಅಹ್ಮದಿಯಾ ಜಮಾಅತಿನಲ್ಲಿ ಮಾರ್ಚ್ 23 ರಂದು ಯೌಮೆ ಮಸೀಹ್ ಮೌಊದ್" ಆಚರಿಸಲಾಗುತ್ತದೆ. ಅಲ್ಲಾಹನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ಪೈಗಂಬರ್(ಸ) ರವರ ಭವಿಷ್ಯವಾಣಿ ಪ್ರಕಾರ ಕಾಲಘಟ್ಟದ ಮಸೀಹ್ ಮೌಊದ್ ಮತ್ತು ಮಹದಿಯನ್ನು ನಂಬಲು ನಮಗೆ ಅಲ್ಲಾಹನು ತೌಫೀಕ್ (ಭಾಗ್ಯ) ನೀಡಿರುವನು ಎಂಬುದು ನಮ್ಮ ಸೌಭಾಗ್ಯವಾಗಿದೆ.

ಯೌಮೆ ಮಸೀಹ್ ಮೌಊದ್ ಪರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಪದಗಳಲ್ಲಿ ಸೂರಃ ಜುಮುಅ ವಚನಗಳ ವ್ಯಾಖ್ಯಾನ

ವಾಗ್ದತ್ತ ಮಸೀಹನ ಕಾಲಘಟ್ಟದ ವಿವಿಧ ಕುರುಕುಹಗಳ ವಿವಿಧ ಭವಿಷ್ಯವಾಣಿಗಳ ಹಾಗೂ ಹಝ್ರತ್ ಮಸೀಹ್ ಮೌಊದ್(ಅ) ರವರ ವಾದ ಕುರಿತು ಸಂಕ್ಷಿಪ್ತ ವಿವರ

ಅಹ್ಮದಿಯಾ ಪ್ರಪಂಚ, ಪಾಕಿಸ್ತಾನ, ಬರ್ಕಿನಫಾಸು ಮತ್ತು ಬಾಂಗ್ಲಾದೇಶ ಅಹ್ಮದಿಯರಿಗಾಗಿ ಅಲ್ಲದೇ ಲೋಕವನ್ನು ವಿನಾಶದಿಂದ ಸಂರಕ್ಷಿಸಲು ಪ್ರಾರ್ಥನೆಗಳಿಗಾಗಿ ಪ್ರೇರಣೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24–03–2023** ರಂದು ನೀಡಿದ **ಖುತ್‌ಬ ಜುಮುಅ**

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ
اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ -
اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ اِيَّاكَ نَعْبُدُ وَاِيَّاكَ نَسْتَعِيْنُ ○
اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○
هُوَ الَّذِيْ بَعَثَ فِي الْاُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ وَ
اِنْ كَانُوْا مِنْ قَبْلُ لَفِيْ ضَلٰلٍ مُّبِيْنٍ ۔ وَّاٰخَرِيْنَ مِنْهُمْ لَمَّا يَلْحَقُوْا بِهِمْ وَهُوَ الْعَزِيْزُ الْحَكِيْمُ ۔ (الجمعة: 3-4)

**ಹುವಲ್ಲಝಿ ಬಅಸ ಫಿಲ್ ಉಮ್ಮೀಈನ ರಸೂಲಮ್ಮಿನ್‌ಹುಮ್ ಯತ್‌ಲೂ ಅಲೈಹಿಮ್ ಆಯಾತಿಹೀ ವ ಯುಝಕ್ಕೀಹಿಮ್ ವ ಯುಅಲ್ಲಿಮುಹುಮುಲ್ ಕಿತಾಬ ವಲ್‌ಹಿಕ್ಮತ ವ ಇನ್‌ಕಾನೂ ಮಿನ್ ಖಬ್ಲಿ ಲಫೀ ಝಲಾಲಿಮ್ಮುಬೀನ್– ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬುಹಿಮ್ ವ ಹುವಲ್ ಅಝೀಝುಲ್ ಹಕೀಮ್–** (ಸೂರಃ ಜುಮುಅ–4–4)

ಈ ಆಯತ್‌ಗಳ ಅನುವಾದ: ಅನಕ್ಷರಸ್ಥ ಜನರಲ್ಲಿ ಅವರಿಂದಲೇ ಒಬ್ಬ ಸಂದೇಶವಹಕನನ್ನು ನಿಯುಕ್ತಿಗೊಳಿಸಿದನು ಅವನೇ. ಆ ಸಂದೇಶವಾಹಕ ಅಲ್ಲಾಹನ ವಚನಗಳನ್ನು ಅವರಿಗೆ ವಾಚಿಸುತ್ತಾರೆ. ಅವರನ್ನು ಶುದ್ಧಿಕರಿಸುತ್ತಾರೆ ಹಾಗೂ ಅವರಿಗೆ ವಾಚಿಸುತ್ತಾರೆ. ಅವರನ್ನು ಶುದ್ಧಿಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನು ಜ್ಞಾನವನ್ನು ಕಲಿಸುತ್ತಾರೆ. ಮುಂಚೆಯಾದರೋ ಆ ಜನರು ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು. ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ, ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ.

ಅಹ್ಮದಿಯಾ ಜಮಾಅತಿನಲ್ಲಿ ಮಾರ್ಚ್ 23 ರಂದು "ಯೌಮೆ ಮಸೀಹ್ ಮೌಊದ್" ಆಚರಿಸಲಾಗುತ್ತದೆ. ಅಲ್ಲಾಹನ ವಾಗ್ದಾನ ಪ್ರಕಾರ ಮತ್ತು ಹಝ್ರತ್ ಪೈಗಂಬರ್(ಸ) ರ ಭವಿಷ್ಯವಾಣಿ ಪ್ರಕಾರ ಕಾಲಘಟ್ಟದ ಮಸೀಹ್ ಮೌಊದ್ ಮತ್ತು ಮಹದಿಯನ್ನು ನಂಬಲು ನಮಗೆ ಅಲ್ಲಾಹನು ತೌಫೀಕ್ ನೀಡಿರುವನು ಎಂಬುವುದು ನಮ್ಮ ಸೌಭಾಗ್ಯ. ಲೂಧಿಯಾನದಲ್ಲಿ

ಬೈಅತ್‌ನ್ನು ಪಡೆದುಕೊಂಡು ನಿಷ್ಠಾವಂತ ಜಮಾಅತನ್ನು ಸ್ಥಾಪಿಸಿದರು. ನಾನು ಪಠಿಸಿದ ಸೂರ: ಜುಮುಅದ ವಚನದಲ್ಲಿ ಹಝ್ರತ್ ಮಸೀಹರ ಜಮಾಅತಿನ ಸ್ಥಾಪನೆಯ ಸುವಾರ್ತೆಯನ್ನು ನೀಡಲಾಗಿದೆ. ಇದಲ್ಲದೇ ಇತರ ವಚನಗಳಲ್ಲೂ ಮತ್ತು ಹದೀಸುಗಳಲ್ಲೂ ಈ ಸುವಾರ್ತೆ ಇದೆ. ಈಗ ನಾನು ಈ ವಚನಗಳ ವ್ಯಾಖ್ಯಾನ ಮತ್ತು ಮಸೀಹ್ ಮೌಊದ್ ರ ಕಾಲಘಟ್ಟದ ಬಗ್ಗೆ ಹೇಳಲಾದ ಅನೇಕ ಕುರುಹುಗಳ ವಿವರಣೆಯನ್ನು ಹಝ್ರತ್ ಮಸೀಹ್ ಮೌಊದ್(ಅ) ರ ಮಾತುಗಳಲ್ಲಿ ವಿವರಿಸುವೆನು. ಅದೇ ರೀತಿಯಲ್ಲಿ ಹಝುರತ್ ಮಸೀಹ್ ಮೌಊದ್(ಅ) ರವರ ವಾದವನ್ನು ಸಹ ಸಂಕೀಪ್ತವಾಗಿ ಅವರ ಮಾತುಗಳಲ್ಲಿ ಮುಂದಿರುಸುತ್ತೇನೆ.

ಈ ವಚನಗಳನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ವಚನದ ಸಾರಾಂಶವೇನೆಂದರೆ, ಜನರಲ್ಲಿ ಅರಿವು ಮತ್ತು ವಿವೇಕ ಇಲ್ಲವಾದಂತಹ ಕಾಲದಲ್ಲಿ ಸಂದೇಶವಾಹಕರನ್ನು ನಿಯುಕ್ತಿಗೊಳಿಸಿದವನು ಅಲ್ಲಾಹನೇ. ಜೀವನ ಸಂಪೂರ್ಣವಾಗುವಂತಹ ಮತ್ತು ಮನುಷ್ಯನ ಆತ್ಮವನ್ನು ಉನ್ನತಿಗೆ ತಲುಪಿಸುವಂತಹ ಧರ್ಮದ ಯುಕ್ತಿಯ ಬಗೆಗಿನ ಜ್ಞಾನಗಳು ಪೂರ್ಣವಾಗಿಯೂ ಕಾಣೆಯಾಗಿದ್ದವು. ಅಂತಹ ಸಮಯದಲ್ಲಿ ಅಲ್ಲಾಹನು ತನ್ನ ಉಮ್ಮಿ ರಸೂಲನ್ನು ಕಳುಹಿಸಿದನು. ಆ ಪ್ರವಾದಿ ಆ ಜನರ ಆತ್ಮಗಳನ್ನು ಪರಿಶುದ್ಧಗೊಳಿಸಿದರು ಹಾಗೂ ಗ್ರಂಥದ ಅರಿವು ಮತ್ತು ಜ್ಞಾನದಿಂದ ಅವರನ್ನು ತುಂಬಿಸಿದರು ಎಂದರೆ ಕುರುಹುಗಳು ಮತ್ತು ದೃಷ್ಟಾಂತಗಳ ಮೂಲಕ ಸಂಪೂರ್ಣ ದೃಢವಿಶ್ವಾಸದ ಮಟ್ಟಕ್ಕೆ ಅವರನ್ನು ತಲುಪಿಸಿದರು. ಕೊನೆಯ ಕಾಲಘಟ್ಟದಲ್ಲಿ ಪ್ರಕಟಗೊಳ್ಳುವ ಮತ್ತೊಂದು ಜನತೆಯೂ ಇದೆ. ಅವರು ಕೂಡ ಆರಂಭದಲ್ಲಿ ಅಂಧಕಾರ ಮತ್ತು ದುರ್ಮಾರ್ಗದಲ್ಲಿ ಇರುವರು. ಆಗ ಅಲ್ಲಾಹನು ಅವರನ್ನು ಕೂಡ ಸಹಾಬಿಯರ ಹಾಗೆ ಮಾಡುವನು. ಅವರ ಸತ್ಯಸಂಧತೆ ಮತ್ತು ದೃಢವಿಶ್ವಾಸ ಕೂಡಾ ಸಹಾಬಿಯರ ಸತ್ಯಸಂಧತೆ ಮತ್ತು ದೃಢವಿಶ್ವಾಸದ ಹಾಗೆ ಆಗುವುದು. ಹಝ್ರತ್ ಪೈಗಂಬರ್(ಸ) ಇದನ್ನು ಹೇಳುವಾಗ ಸಲ್ಮಾನ್ ಫಾರಸಿಯ ಹೆಗಲ ಮೇಲೆ ಕೈಯಿಟ್ಟರು ಎಂದು ಪ್ರಬಲವಾದ ಹದೀಸಿನಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು. **ಲೌ ಕಾನಲ್ ಈಮಾನು ಮುಅಲ್ಲಿಖನ್ ಬಿಸ್ಸುರಯ್ಯಾ ಲನಾಲಹು ರಜುಲನ್ ಮಿನ್ ಫಾರಿಸ್**. ಅಂದರೆ ಪವಿತ್ರ ಖುರ್‌ಆನ್ ಆಕಾಶಕ್ಕೆ ಎತ್ತಲ್ಪಡುವುದು ಎಂದು ಈ ಕಾಲಘಟ್ಟದ ಬಗ್ಗೆ ಹೇಳಲಾಗಿದೆ. ಮಸೀಹ್ ಮೌಊದ್ ಎಂದು ಕರೆಯಲ್ಪಡುವ ವ್ಯಕ್ತಿಯೇ ಫಾರಸಿ ವಂಶದ ಆ ವ್ಯಕ್ತಿಯಾಗಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ವಚನದ ಅರ್ಥವೇನೆಂದರೆ, ಸಂಪೂರ್ಣ ದುರ್ಮಾರ್ಗದ ನಂತರ ಸನ್ಮಾರ್ಗ ಮತ್ತು ಯುಕ್ತಿ ಜ್ಞಾನವನ್ನು ಗಳಿಸುವ ಹಾಗೂ ಹಝ್ರತ್ ಪೈಗಂಗರ್(ಸ) ರ ದೃಷ್ಟಾಂತಗಳನ್ನು ಮತ್ತು ಅನುಗ್ರಹಗಳನ್ನು ಕಣ್ಣಾರೆ ಕಾಣುವ ಜನತೆ ಎರಡೇ ಆಗಿರುವರು. ಮೊದಲನೆಯದು ಸಹಾಬಿಯುವರದ್ದು ಮತ್ತು ಎರಡನೆಯದ್ದು ಸಹಾಬಿಯರಂತಹ ಮತ್ತೊಂದು ಜನತೆ. ಅದು ಮಸೀಹ್ ಮೌಊದ್‌ರ ಸಂಘವಾಗಿದೆ. ಏಕೆಂದರೆ ಆ ಜನತೆ ಸಹ ಹಝ್ರತ್ ಪೈಗಂಬರ್(ಸ) ರ ದೃಷ್ಟಾಂತಗಳನ್ನು ನೋಡುವವರಾಗಿರುತ್ತಾರೆ. ಈಗ ಹಾಗೆಯೇ ಆಗಿದೆ. ಸಾವಿರದ ಮುನ್ನೂರು ವರ್ಷಗಳ ನಂತರ ಹಝ್ರತ್ ಪೈಗಂಬರ್(ಸ) ರ ಅದ್ಭುತ ದೃಷ್ಟಾಂತಗಳ ಬಾಗಿಲು ತೆರೆದಿದೆ. ದಾರುಖುತ್‌ನಿಯ ಹದೀಸು ಮತ್ತು ಫತಾವಾ ಇಬ್ನು ಹಜರ್ ಪ್ರಕಾರ ರಂಝಾನ್ ತಿಂಗಳಿನಲ್ಲಿ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣ ಆದದ್ದನ್ನು ಜನರು ಕಣ್ಣಾರೆ ಕಂಡರು. ಅದೇ ರೀತಿ ಮಸೀಹ್ ಮೌಊದ್‌ರ ಕಾಲದಲ್ಲಿ ದುಸ್ಸಿನೀನ್ ನಕ್ಷತ್ರ ಹೊರಡುವುದು ಎಂದು ಹೇಳಲಾಗಿತ್ತು. ಅದು ಹೊರಡುವುದನ್ನು ಸಾವಿರಾರು ಜನರು ಕಂಡರು. ಅದೇ ರೀತಿಯಲ್ಲಿ ಜಾನಾದ ಬೆಂಕಿಯನ್ನು ಸಾವಿರಾರು ಜನರು ಕಂಡರು. ಅದೇ ರೀತಿಯಲ್ಲಿ ಪ್ಲೇಗಿನ ಹರಡುವಿಕೆ ಮತ್ತು ಹಜ್ಜ್ ಕರ್ಮಾನುಷ್ಠಾನದಿಂದ ತಡೆಯಲ್ಪಡುವುದನ್ನು ಕೂಡ ಎಲ್ಲರೂ ಕಣ್ಣಾರೇ ಕಂಡರು. ದೇಶದಲ್ಲಿ ರೈಲು ತಯಾರಾಗುವುದು ಮತ್ತು ಒಂಟೆಗಳು ಪ್ರಯೋಜನರಹಿತವಾಗುವುದು ಇವೆಲ್ಲವೂ ಹಝ್ರತ್ ಪೈಗಂಬರ್(ಸ) ರ ಭವಿಷ್ಯವಾಣಿ ಕುರುಹುಗಳಾಗಿದದವು. ಅವುಗಳನ್ನು ಸಹಾಬಿಯರು ದೃಷ್ಟಾಂತಗಳನ್ನು ಕಂಡ ಹಾಗೆಯೇ ಈ ಕಾಲದಲ್ಲಿ ಕಾಣಲಾಯಿತು. ಇದೇ ಕಾರಣದಿಂದ ಪ್ರತಾಪವಂತನಾದ ಅಲ್ಲಾಹನು ಈ ಕೊನೆಯ ಜನತೆಯನ್ನು ಮಿನ್‌ಹುಂ ಎಂಬ ಪದದಿಂದ ಕರೆದನು. ದೃಷ್ಟಾಂತಗಳನ್ನು ನೋಡುವುದರಲ್ಲಿ ಇವರೂ ಕೂಡ ಸಹಾಬಿರ ಹಾಗೆ ಆಗಿರುವರು ಎಂಬುದನ್ನು ಸೂಚಿಸಲಿಕ್ಕೆ ಹೀಗೆ ಕರೆಯಲಾಗಿತ್ತು. ಯೋಚಿಸಿ ನೋಡಿರಿ, ಸಾವಿರದ ಮುನ್ನೂರು ವರ್ಷಗಳಲ್ಲಿ ಪ್ರವಾದಿತ್ವ ಮಾರ್ಗದ ಇಂತಹ ಕಾಲಘಟ್ಟ ಯಾರಿಗೆ ಲಭಿಸಿದೆ? ನಮ್ಮ ಜಮಾಅತಿನ ಅನೇಕ ಕಾರಣಗಳಿಂದ ಸಹಾಬಿಯರ ಜಮಾಅತಿನೊಂದಿಗೆ ಹೋಲಿಕೆಯಿದೆ. ಸಹಾಬಿಯರು ಗಳಿಸಿದ ಹಾಗೆಯೇ ಅವರು ಸಹ ಅಲ್ಲಾಹನ ದೃಷ್ಟಾಂತಗಳಿಂದ ಹಾಗೂ ತಾಜಾ ದೈವಿಕ ಸಹಾಯಗಳಿಂದ ಪ್ರಕಾಶ ಮತ್ತು ದೃಢವಿಶ್ವಾಸವನ್ನು ಗಳಿಸುತ್ತಾರೆ. ಸಹಾಬಿಯರು ಸಹಿಸಿದ ಹಾಗೆಯೇ ಅವರು ಸಹ ಅಲ್ಲಾಹನ ಮಾರ್ಗದಲ್ಲಿ ಜನರ ಚುಚ್ಚುಮಾತು, ಶಾಪ ಹಾಕುವಿಕೆ, ಅಪಹಾಸ್ಯ, ಗೇಲಿಮಾತು, ಬೈಗುಳ ಹಾಗೂ ಸಂಬಂಧ ವಿಚ್ಛೇದನದ ದುಃಖವನ್ನು ಸಹಿಸುತ್ತಿದ್ದಾರೆ. ಸಹಾಬಿಯರು ಗಳಿಸಿದ ಹಾಗೆಯೇ ಅವರು ಅಲ್ಲಾಹನ ದೃಷ್ಟಾಂತಗಳು ಮತ್ತು ದೈವಿಕ ಸಹಾಯದಿಂದ ಪರಿಶುದ್ಧ ಜೀವನವನ್ನು ಗಳಿಸುತ್ತಿದ್ದಾರೆ. ಸಹಾಬಿಯರು ಆಳುತ್ತಾರೆ ಮತ್ತು ಸಜೀವ ಸ್ಥಳಗಳನ್ನು ಕಣ್ಣೀರಿನಿಂದ ಒದ್ದೆ ಮಾಡುತ್ತಾರೆ. ಸಹಾಬಿಯರ ಹಾಗೆಯೇ ಅವರಲ್ಲಿ ಅನೇಕರು ದಿವ್ಯವಾಣಿಗಳನ್ನು ಪಡೆಯುತ್ತಾರೆ. ಈ ಜಮಾಅತ್ ಸಹಾಬಿಯರಿಗೆ ಸಮಾನವಾಗಿರುವ ಹಾಗೆಯೇ ಈ ಜಮಾಅತಿನ ಇಮಾಂ ಹಝ್ರತ್ ಪೈಗಂಬರ್(ಸ) ರೊಂದಿಗೆ ಹೋಲಿಕೆಯನ್ನು ಹೊಂದಿರುವರು. ಮಹದಿಯ ಗುಣಗಳು ಹಝ್ರತ್ ಪೈಗಂಬರ್(ಸ) ಗುಣಗಳಿಗೆ ಸಮಾನತೆ ಹೊಂದಿರುವುವು ಎಂದು ಹಝ್ರತ್ ಪೈಗಂಬರ್(ಸ) ಸ್ವತಃ ಹೇಳಿದ್ದರು. ಎರಡು ಸಮಾನತೆಗಳು ಅವರಲ್ಲಿ ಇರುವುವು. ಒಂದು ಸಮಾತನೆಯು ಹಝ್ರತ್ ಮಸೀಹರೊಂದಿಗೆ ಆಗಿರುವುದು. ಆದ ಕಾರಣದಿಂದ ಅವರು ಮಸೀಹ್ ಎಂದು ಕರೆಯಲ್ಪಡುವರು. ಎರಡನೇ ಸಮಾತನೆಯು ಹಝ್ರತ್ ಪೈಗಂಬರ್(ಸ) ರೊಂದಿಗೆ ಆಗಿರುವುದು. ಆದ ಕಾರಣದಿಂದ ಅವರು ಮಹದಿ ಎಂದು ಕರೆಯಲ್ಪಡುವರು. ಇದೇ ರಹಸ್ಯದೆಡೆ ಗಮನ ಸೆಳೆಯಲು ಬರೆಯಲಾಗಿದೆ. ಅವರ ಶರೀರದ ಒಂದು ಭಾಗ ಇಸ್ರಾಯೀಲರ ರೂಪದಲ್ಲಿದ್ದರೆ ಎರಡನೇ ಭಾಗ ಅಬಿಧಾಟಿಯಲ್ಲಿರುವುದು ಎಂದು. ಹಝ್ರತ್ ಮಸೀಹ್(ಅ) ಮೂಸಾ ಜನಾಂಗವು ಅಪಾಯಕರ ಸ್ಥಿತಿಯಲ್ಲಿರುವಾಗ ಬಂದಿದ್ದರು. ತೌರಾತ್ ಶಿಕ್ಷಣ ಮತ್ತು ಅದರ ಭವಿಷ್ಯವಾಣಿ ಹಾಗೂ ಪವಾಡಗಳ ಮೇಲೆ ಗಂಭೀರ ರೀತಿಯ ಆಕ್ರಮಣಗಳನ್ನು ಮಾಡಲಾಗುತ್ತಿತ್ತು. ಯುನಾನಿಗಳ ಭಾವನೆಗಳ ಪ್ರಕಾರ ಅಲ್ಲಾಹನ ಅಸ್ತಿತ್ವವನ್ನು ಸಹ ದೃಷ್ಟಿಯಲ್ಲಿ ಒಂದು ಸೃಷ್ಟಿಯಂತಾಗಿದೆ. ತಮ್ಮ ಸ್ವಇಚ್ಛೆಯಿಂದ ಸೃಷ್ಟಿಯನ್ನು ಸೃಷ್ಟಿಸಲಿಲ್ಲ ಎಂದು ಭಾವಿಸುತ್ತಿದ್ದರು ಎಂದರೆ ಸಾಮಾನ್ಯ ಸೃಷ್ಟಿಯ ರೀತಿಯಲ್ಲೇ ಇದ್ದಾನೆ. ಎಲ್ಲಾ ಸೃಷ್ಟಿಗಳ ಮಾಲೀಕನು ಅಲ್ಲ. ಬಯಸಿದಂತೆ ಸೃಷ್ಟಿಸುವ ಸಾಮರ್ಥ್ಯವಿಲ್ಲ, ಪ್ರವಾದಿತ್ವ ಬಗ್ಗೆಯೂ ಲಘುಮಾತುಗಳನ್ನು ಆಡುತ್ತಿದ್ದರು.

ಎಲ್ಲಾ ಸೃಷ್ಟಿಗಳ ಮಾಲೀಕನು ಅಲ್ಲ. ಬಯಸಿದಂತೆ ಸೃಷ್ಟಿಸುವ ಸಾಮಾರ್ಥ್ಯವಿಲ್ಲ. ಪ್ರವದಿತ್ವ ಬಗ್ಗೆಯೂ ಲಘು ಮಾತುಗಳನ್ನು ಆಡುತ್ತಿದ್ದರು. ಆದುದರಿಂದ ಹಝ್ರತ್ ಈಸಾ(ಅ) ಹಝ್ರತ್ ಮೂಸಾ(ಅ) ನಂತರ ಹದಿನಾಲ್ಕು ನೂರು ವರ್ಷಗಳ ನಂತರ ಕಳುಹಿಸಲ್ಪಡಲು ಕಾರಣ, ಮೂಸಾರ ಪ್ರವಾದಿತ್ವ ಮತ್ತು ಅವರ ಸಂಘಟನೆಯ ಸತ್ಯತೆಯ ಬಗ್ಗೆ ಸಾಕ್ಷ್ಯಗಳನ್ನು ಒದಗಿಸುವುದು ಆಗಿತ್ತು. ಮತ್ತು ಹೊಸದಾದ ದೈವಿಕ ದೃಷ್ಟಾಂತಗಳಿಂದ ಮುಸಾರ ಕಟ್ಟಡವನ್ನು ಮತ್ತೊಮ್ಮೆ ಪೂರ್ಣಗೊಳಿಸುವುದು ಆಗಿತ್ತು. ಅದೇ ರೀತಿ ಈ ಜನಾಂಗಕ್ಕೆ ಕಳುಹಿಸಲ್ಪಟ್ಟ ವಾಗ್ದತ್ತ ಮಸೀಹರು ಸಹ ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಕಳುಹಿಸಲಾಗಿದೆ. ಇವರ ಆಗಮನದ ಉದ್ದೇಶವು ಅದೇ ಆಗಿದೆ. ಯೂರೋಪ್ ತತ್ವಗಳು ಮತ್ತು ಯೂರೋಪ್ ದಜ್ಜಾಲುಗಳು ಇಸ್ಲಾಮಿನ ಮೇಲೆ ಹಲವು ರೀತಿಯಲ್ಲಿ ಆಕ್ರಮಣ ಮಾಡಿದರು. ಹಝ್ರತ್ ಪೈಗಂಬರ್(ಸ) ರವರ ಪ್ರವಾದಿತ್ವ, ಭವಿಷ್ಯವಾಣಿಗಳು ಮತ್ತು ಪವಾಡಗಳನ್ನು ತಿರಸ್ಕರಿಸಿದರು. ಪವಿತ್ರ ಖುರ್‌ಆನ್‌ನ ಮೇಲೆ ಆಕ್ಷೇಪಗಳನ್ನು ಮಾಡಿದರು. ಅದರ ಪಾವಿತ್ರ್ಯತೆ ಮತ್ತು ಇಸ್ಲಾಮಿನ ಪ್ರಕಾಶವನ್ನು ಅಪಹಾಸ್ಯಗೈದರು. ಮುಹಮ್ಮದ್ ಪ್ರವದಿತ್ವದ ಮೇಲೆ ಸಾವಿರ ಸಾವಿರ ಆಶೀರ್ವಾದಗಳು. ಅದರ ಸತ್ಯತೆ ಮತ್ತು ದೈವಿಕ ಸಹಕಾರ ಪ್ರಕಟಗೊಳ್ಳಲಿ. ಅದರಲ್ಲಿ ರಹಸ್ಯವೇನಿದೆ ಎಂದರೆ, ಅದನ್ನು ಬರಾಹೀನೆ ಅಹ್ಮದಿಯಾದಲ್ಲಿ ಅದು ಇಂದಿನಿಂದ 70 ವರ್ಷಗಳ ಹಿಂದೆ ಒಂದು ದಿವ್ಯವಾಣಿ ಅದಕ್ಕೆ ಸಂಬಂಧಿಸಿದ್ದಾಗಿತ್ತು. ಆ ದಿವ್ಯವಾಣಿ ಲಕ್ಕಷಾಂತರ ಜನರ ಮುಂದೆ ಪ್ರಕಟಗೊಳಿಸಲಗಿದೆ. ಅದೇನೆಂದರೆ "ಬಖರಾಮ್ ಕೆ ವಖ್ತೆ ತೂ ನಝ್ದೀಕ್ ರಸೀದು ಪಾಯೆ ಮುಹಮ್ಮದಿಯಾಂ ಬರ್ ಮಿನಾರ್ ಬುಲಂದ್ಯರ್ ಮೆಹಕಂ ಉಫ್ತಾದ್".

ಹಝ್ರತ್ ಮಸೀಹ್ ಮೌಊದ್(ಅ) ಅವರ ವ್ಯಾಖ್ಯಾನದೊಂದಿಗೆ ಸ್ವಯಂ ಹೀಗೆ ಉಲ್ಲೇಖಿಸಿರುವರು. "ಈಗ ಆಗಮಿಸು ಮತ್ತು ಪ್ರಕಟಗೊಳ್ಳು. ನಿನ್ನ ಸಮಯ ಸಮೀಪ ಬಂದಿದೆ, ಎಂದರೆ ಮುಸಲ್ಮಾನರು ಅದಃಪತನದಿಂದ ರಕ್ಷಿಸಲ್ಪಡುವರು ಎಂದರೆ ಮುಸಲ್ಮಾನರು, ಒಂದು ಎತ್ತರವಾದ ಹಾಗೂ ಪ್ರಬಲವಾದ ಮೀನಾರನ ಮೇಲೆ ಅವರ ಹೆಜ್ಜೆಯಿರುವುದು.
(ದೈವವಾಣಿಯ ಅನುವಾದ, ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–511)

ಮತ್ತೆ ಹೇಳಿದರು. ಪಾಕ್ ಮುಹಮ್ಮದ್ ಮುಸ್ತಫಾ ನಬಿಯೊಂ ಕಾ ಸರ್ದಾರ್. (ಪವಿತ್ರ ಮುಹಮ್ಮದರು ಪ್ರವಾದಿಗಳ ಸರದರನಾಗಿದ್ದಾರೆ. ಅಲ್ಲಾಹನು ನಿನ್ನ ಎಲ್ಲಾ ಕಾರ್ಯಗಳನ್ನು ಸರಿಪಡಿಸುವನು, ನಿನ್ನ ಎಲ್ಲಾ

ಬೇಡಿಕೆಗಳನ್ನು ಈಡೇರಿಸುವನು. ಪ್ರಭುವಿನ ಸೈನ್ಯಗಳು ಇತ್ತ ಗಮಹರಿಸುವರು. ಈ ದೃಷ್ಟಾಂತದ ಉದ್ದೇಶ ಪವಿತ್ರ ಖುರ್‌ಆನ್ ದೇವಗ್ರಂಥೌಆಫೀದೆ ಮತ್ತು ನನ್ನ ಬಾಯಿಮಾತುಗಳಾಗಿವೆ ಎಂದು. ಯೋಚಿಸಿ ನೋಡಿರಿ ಇದರ ತಾತ್ಪರ್ಯವೇನು. (ಇದು ಅಲ್ಲಾಹನು ದಿವ್ಯವಾಣಿ ಮೂಲಕ ತಿಳಿಸಿರುವನು).

ಯಾವ ಉದ್ದೇಶಕ್ಕಾಗಿ ಹಝ್ರತ್ ಈಸಾ(ಅ) ಬಂದಿದ್ದರು ಎಂದು ನಾನು ವಿವರಿಸುತ್ತೇನೆ, ತೌರಾವನ್ನು ಸುಳ್ಳಾಗಿಸುವ ಸಮಯದಲ್ಲಿ ಹೊಸ ದೃಷ್ಟಾಂತಗಳೊಂದಿಗೆ ಅದರ ಸತ್ಯತೆ ವ್ಯಕ್ತಪಡಿಸಿದರು. ಅದೇ ಉದ್ದೇಶಕ್ಕಾಗಿ ಅಲಾಹನು ನನಗೆ ಕಳುಹಿಸಿರುವನು. ಪವಿತ್ರ ಖುರ್‌ಆನ್‌ನ ಸತ್ಯತೆಯನ್ನು ಕಡೆಗಾಣಿಸಿದವರಿಗೆ ಹೊಸ ದೃಷ್ಟಾಂತಗಳ ಮೂಲಕ, ಅದರ ಸತ್ಯತೆಯನ್ನು ವ್ಯಕ್ತಪಡಿಸಬೇಕು. "ಪಾಯೆ ಮುಹಮ್ಮದಿಯಾಂ ಬರ್ ಮಿನಾರ್ ಬಲಂದರ್ ತರ್ ಮೆಹಕಂ ಉಫ್ತಾದ್, ಈ ದಿವ್ಯವಾಣಿಯಲ್ಲಿ ಅದೇ ಪ್ರಸ್ತಾಪಿಸಲಾಗಿದೆ. ಅದೇ ಸಂಕೇತ, ಇನ್ನೊಂದು ದಿವ್ಯವಾಣಿ ಬರಾಹೀನ್ ಅಹ್ಮದಿಯಾದಲ್ಲಿ ಹೀಗಿದೆ. **ಅರ್‌ರಹ್ಮಾನ್ ಅಲ್ಲಮಲ್ ಖುರ್‌ಆನ್. ಲಿತುನ್‌ಝಿರ ಖೌಮಮ್ಮಾ ಉನ್‌ಝಿರ ಆಬಾಉಹುಮ್. ವಲಿತಸ್ತಬೀನ ಸಬೀಲುಲ್ ಮುಜ್ರಿಮೀನ, ಖುಲ್ ಇನ್ನೀ ಉಮಿರ್ತು ವ ಅನಾ ಅವ್ವಲುಲ್ ಮುಮಿನೀನ್."**

ಅನುವಾದ: ಆ ಪರಮ ದಯಾವಂತನು. ಖುರ್‌ಆನ್‌ನ್ನು ಕಲಿಸಿದನು. ನೀನು ಒಂದು ಜನಾಂಗಕ್ಕೆ ಮುನ್ನೆಚ್ಚರಿಕೆ ನೀಡಲಿಕ್ಕೋಸ್ಕರ ಅವರ ತಂದೆ ತಾತಂದಿರಿಗೆ ಮುನ್ನೆಚ್ಚರಿಕೆ ನೀಡಲಾಗಿಲ್ಲ. ಅಪರಾಧಿಗಳ ದಾರಿ ತೆರೆಯಲು, ಅಪರಾದಿಗಳ ಮೇಲೆ ದೇವರ ನ್ಯಾಯತೀರ್ಪು ಪೂರ್ಣಗೊಳಿಸಲು. ನಾನು ದೇವರಿಂದ ನೇಮಿಸಲ್ಪಟ್ಟಿದ್ದೇನೆ ಮತ್ತು ನಾನು ನಂಬುವವರಲ್ಲಿ ಮೊದಲಿಗನಾಗಿದ್ದೇನೆ.

ಅವರು ಹೇಳುತ್ತಾರೆ. ಯಾರಾದರೂ "ಹಝ್ರತ್ ಈಸಾ(ಅ) ಪ್ರವಾದಿಯಾಗಿ ತೌರಾತಿನ ಸತ್ಯವನ್ನು ದೃಢೀಕರಿಸಲು ಬಂದಿದ್ದರು. ಅವರಿಗೋಸ್ಕರ ನಿಮ್ಮ ಸಾಕ್ಷಿಗೆ ಏನು ಮಹತ್ವವಿದೆ. ಅವರಂತೂ ಅಲ್ಲಾಹನ ಸಂದೇಶವಾಹಕರಾಗಿದ್ದರು. ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ಮಾಡಿ ತೌರಾತಿನ ದೃಢೀಕರಣಕ್ಕಾಗಿ ಬಂದಿದ್ದರು. ನೀವು ಹೇಗೆ, ಯಾವ ನೆಲೆಯಲ್ಲಿ ಪವಿತ್ರ ಖುರ್‌ಆನ್‌ನ ಸಾಕ್ಷ್ಯಕ್ಕಾಗಿ ಬಂದಿರುವಿರಿ. ಹೇಳಿದರು. ಈಗಲೂ ಇಲ್ಲಿಯೂ ಹೊಸದಾಗಿ ನವೀಕರಿಸಲು ಒಬ್ಬ ನಬಿಯೇ ಬೇಕಾಗಿತ್ತು. ಜನರು ಹೇಳುತ್ತಾರೆ. ಈ ಸಾಕ್ಷಿಯ ಅಗತ್ಯಗಳೇನು? ಈ ಪ್ರಶ್ನೆಗೆ ಉತ್ತರವೇನೆಂದರೆ ಇಸ್ಲಾಮಿನಲ್ಲಿ ಸ್ವತಂತ್ರರಾಗಿ ಬರುವಂತಹ ಪ್ರವಾದಿತ್ವ ಸಮಾಪ್ತಿಗೊಂಡಿದೆ.

ಅವರು ಹೇಳುತ್ತಾರೆ. ಅಲ್ಲಾಹನು ಹೇಳಿದನು. **ವಲಾಕಿನ್ ರಸೂಲುಲಾಹಿ ವ ಖಾತಮನ್ನಬಿಯೀನ್** (ಅಲ್ ಅಹಝಾಬ್-41) ಮತ್ತು ಹದೀಸಿನಲ್ಲಿ **ಲಾ ನಾಬಿಯ ಬಅದಿ,** ಅದಲ್ಲದೇ ಹಝ್ರತ್ ಮಸೀಹರ ಮರಣ ಸತ್ಯಾದಾರಿತ ಪುರಾವೆಯೊಂದಿಗೆ ಸಾಬೀತಾಗಿದೆ. ಆದುದರಿಂದ ಅವರ ಪುನರಾಗಮನದ ಭರವಸೆ ಅರ್ಥಹೀನವಾಗಿದೆ. ಖುರ್‌ಆನ್ ಹೇಳುತ್ತದೆ. ಹದೀಸು ಹೇಳುತ್ತದೆ. ಮತ್ತು ಇದು ಸಾಬೀತಾದ ವಿಷಯವಾಗಿದೆ. ಮಸೀಹನು ಮರಣ ಹೊಂದಿರುವನು. ಆದುದರಿಂದ ಮಸೀಹರ ಪುನರಾಗಮನದ ವಿಶ್ವಾಸ ತಪ್ಪಾಗಿರುತ್ತದೆ.

ಅವರು ಹೇಳುತ್ತಾರೆ. ಹೊಸ ಅಥವಾ ಹಳೆಯ ನಬಿ ಏನಾದರೂ ಆಗಮಿಸಿದರೆ ನಮ್ಮ ನಬಿವರ್ಯರು ಖಾತಮನ್ನಬಿಯೀನ್ ಆಗಲು ಹೇಗೆ ಸಾಧ್ಯ? ಹೌದು ಅಲ್ಲಾಹನ ವಿಲಾಯತ್ ಮತ್ತು ದಿವ್ಯವಾಣಿಗಳ, ಸಂಭಾಷಣೆಯ ಬಾಗಿಲು ಮುಚ್ಚಲ್ಪಟ್ಟಿಲ್ಲ. ಇದರ ಅರ್ಥ ಕೇವಲ ಇಷ್ಟೆ. ಹೊಸ ದೃಷ್ಟಾಂತಗಳೊಂದಿಗೆ ಸರ್ವಧರ್ಮದ ದೃಢೀಕರಣ ಮಾಡುವುದು ಮತ್ತು ಅದರ ಸತ್ಯತೆಯ ಕುರಿತು ಸಾಕ್ಷ್ಯ ನೀಡುವುದು. ಅಲ್ಲಾಹನ ದೃಷ್ಟಾಂತಗಳು ಅದು ನಬಿಯ ಮೂಲಕವಾಗಲಿ ಅಥವಾ ವಲಿಯ ಮೂಲಕವಾಗಲಿ ಅವೆಲ್ಲ ಒಂದೇ ದರ್ಜೆಯದ್ದಾಗಿವೆ. ಏಕೆಂದರೆ ಅದನ್ನು ಕಳುಹಿಸುವವನು ಒಬ್ಬನೇ ಆಗಿರುತ್ತಾನೆ. ಅಲ್ಲಾಹನು ನಬಿಯ ಹಸ್ತದಿಂದ ಮತ್ತು ನಬಿಯ ಮೂಲಕ ದೈವಿಕ ದೃಷ್ಟಾಂತ ತೋರಿಸಿದರೆ ಅದನ್ನು ಶಕ್ತಿಶಾಲಿ ಮತ್ತು ಹೆಚ್ಚು ಗೌರವಪೂರ್ಣ ಎನ್ನುವುದು. ಅದೇ ದೃಷ್ಟಾಂತಗಳು ಒಬ್ಬ ವಲಿಯ ಮೂಲಕ ಬಹಿರಂಗಗೊಂಡರೆ ಅದನ್ನು ಶಕ್ತಿ ಹಾಗೂ ಗೌರವಗಳಲ್ಲಿ ಕಡಿಮೆ ಎಂದು ಭಾವಿಸುವುದು ಮೂರ್ಖತನವಾಗಿದೆ. ಇಸ್ಲಾಮಿನ ಪರವಾಗಿ ಎಂತೆಂತಹ ದೃಷ್ಟಾಂತಗಳು ಉಂಟಾಗುತ್ತವೆ ಎಂದರೆ ಆ ಸಮಯ ನಬಿಯು ಇರುವುದಿಲ್ಲ. ವಲಿಯು ಇರುವುದಿಲ್ಲ. ಉದಾಹರಣೆಗೆ "ಅಸ್‌ಹಾಬುಲ್ ಫೀಲ್" (ಆನೆಯ ಜನರೊಡನೆ) ನ ವಿನಾಶದ ದೃಷ್ಟಾಂತವಿದೆ.

ಹೇಳುತ್ತಾರೆ. ಇದು ನಿರ್ಧಾರಿತವಾಗಿದೆ. ನಬಿಯಿಲ್ಲದಿದ್ದರೆ ಏನೂ ಆಗಲಾರದು ಎಂಬುದಕ್ಕೆ ಇದು ಉತ್ತರವಾಗಿದೆ. ನಬಿಯಿಲ್ಲದಿದ್ದರೂ ವಲಿಯ ಮೂಲಕವೂ ಈ ಕಾರ್ಯ ಸಾಧ್ಯ, ಇಷ್ಟಾದರೂ ನಬಿ. ವಲಿ ಸಹ ಇಲ್ಲದಿದ್ದರೂ ಅಲ್ಲಾಹನು ತನ್ನ ದೃಷ್ಟಾಂತಗಳನ್ನು ತೋರಿಸಲು ನಿಲ್ಲಿಸುವುದಿಲ್ಲ. ಅಸ್‌ಹಾಬುಲ್ ಫೀಲ್ ದೃಷ್ಟಾಂತವೇ ಅದಕ್ಕೆ ಸಾಕ್ಷಿ. ವಲಿಯ ಪವಾಡಗಳು ಅವನ ಒಡೆಯನಾದ ನಬಿಯ ಅನುಸರಣೆಯ ಫಲವಾಗಿರುತ್ತದೆ. ಯಾವ ನಬಿಯು ಅವರು ಅನುಪಾಲಕರಾಗಿದ್ದಾರೆ ಅದು ಅವರದ್ದೇ ಪವಾಡವಾಗಿರುತ್ತದೆ. ಸಹೀ ಹದೀಸಿನಿಂದ ಸಾಬೀತುಗೊಂಡಿದೆ ಮುಹದ್ದಿಸ್ ಸಹ ಪ್ರವಾದಿಗಳ ಹಾಗೂ ಸಂದೇಶವಾಹಕ ರೀತಿಯಲ್ಲಿ ಅಲ್ಲಾಹನ ಸಂದೇಶವಾಹಕರಲ್ಲದೇ ಪರಿಗಣಿಸಲ್ಪಡುತ್ತಾರೆ. ಬುಖಾರಿಯಲ್ಲಿ **"ವಮಾ ಅರ್‌ಸಲ್‌ನಾ ಮಿನ್ ರಸೂಲಿನ ವಲಾ ನಬಿಯಿನ್ ವಲಾ ಮುಹದ್ದಿಸಿನ್"** ಮೇಲೆ ಗಮನಹರಿಸಿ ಓದಿ. ಇನ್ನೊಂದು ಹದೀಸು. **"ಉಲಮಾಉ ಉಮ್ಮತಿ ಕಅಂಬಿಯಾ ಬನೀ ಇಸ್ರಾಯಿಲ್"** ಹೇಳುತ್ತಾರೆ. ಸುಫಿಯಾ ಅವರು ತಮ್ಮ ದಿವ್ಯ ಸ್ವಪ್ನಗಳ ಮೂಲಕ ಈ ಹದೀಸನ್ನು ದೃಢೀಕರಿಸಿದ್ದಾರೆ. ಎಂದರೆ ಅವರಿಂದ ಇದು ದೃಢಪಡಿಸಿಕೊಳ್ಳಲಾಗಿದೆ. ಇದು ಸಹ ನೆನಪಿರಲಿ. ಮುಸ್ಲಿಮರಲ್ಲಿ ಮಸೀಹ್ ಮೌಊದ್ ಪರವಾಗಿ ನಬಿ ಎಂಬ ಪದ ಬಂದಿದೆ. ಅವರು ನಬಿಯಲ್ಲ ಎಂದು ಹೇಳುತ್ತೀರಿ. ನೆನಪಿರಲಿ. ಮೊದಲು ಒಬ್ಬ ವಲಿಯ ಸಾಕ್ಷ್ಯ ನೀಡಿದ್ದೇನೆ. ಎರಡನೆಯದಾಗಿ ಮಸೀಹ್ ಮೌಊದ್‌ನ ಪರವಾಗಿ ನಬಿ ಎಂಬ ಪದ ಹದೀಸಿನಲ್ಲಿ ಬಂದಿದೆ ಎಂದರೆ ಸಾಫಲ್ಯ ರೂಪದಲ್ಲಿ. ಆದುದರಿಂದ ಬರಾಹೀನೆ ಅಹ್ಮದಿಯಾದಲ್ಲೂ ಸಹ ಇಂತಹ ಪದಗಳು ಇವೆ. **ಹುವಲ್ಲಝಿ ಅರ್‌ಸಲ ರಸೂಲಹು ಬಲ್ ಹುದಾ"** ಇಲ್ಲಿ ರಸೂಲ್ ಎಂಬ ತಾತ್ಪರ್ಯ ಈ ವಿನೀತನಾಗಿದ್ದೇನೆ ಎಂದರೆ ಹಝುರತ್ ಮಸೀಹ್ ಮೌಊದ್(ಅ) ಮತ್ತೆ ನೊಡಿರಿ. ಬರಾಹೀನೆ ಅಹ್ಮದಿಯಾದಲ್ಲಿ ಈ ದಿನವ್ಯವಾಣಿ ಇದೆ. **ಜರಿಯುಲ್ಲಾಹಿ ಫೀ ಹುಲಲಿಲ್ ಅಂಬಿಯಾಯಿ,** ಅದರ ಅನುವಾದ "ಅಲ್ಲಾಹನ ಪ್ರವಾದಿ, ಪ್ರವಾದಿಗಳ ವೇಷದಲ್ಲಿ ನೀವು ಹೇಳುತ್ತೀರಿ. ನಬಿ ಬರುವುದಿಲ್ಲ ಎಂದು. ಇದಂತೂ ಹದೀಸಿನಲ್ಲೂ ಕಾಣಬಹುದು. ನನಗೂ ಅಲ್ಲಾಹನು ಹೇಳುತ್ತಿದ್ದಾನೆ. ನಾನು ನಬಿಯಾಗಿರುವೆನು ಎಂದು. ಈ ದಿವ್ಯವಾಣಿಯಲ್ಲಿ ನನ್ನ ಹೆಸರು ರಸೂಲ್ ಮತ್ತು ನಬಿ ಎಂದು ಸಹ ಇಡಲಾಗಿದೆ. ಹಾಗೆ ಯಾವ ವ್ಯಕ್ತಿಯಾದವನಿಗೆ ಸ್ವಯಂ ಅಲ್ಲಾಹನು ಈ ಹೆಸರುಗಳನ್ನು ಇಟ್ಟಿರುವನೋ, ಅದನ್ನು ಜನಸಾಮಾನ್ಯರ ನುಡಿ ಎಂದು ಭಾವಿಸುವುದು ಮೊದಲ ದರ್ಜೆಯ ಉದ್ಧಟತನವಾಗಿದೆ. ಅಲ್ಲಾಹನು ವಿಶದೀಕರಿಸಿದ ದೃಷ್ಟಾಂತಗಳು ಯಾವ ರೀತಿಯಲ್ಲೂ ದುರ್ಬಲವಾಗಲಿಕ್ಕೆ ಸಾಧ್ಯವಿಲ್ಲ. ಅದು ನಬಿಯು ಮೂಲಕವಾಗಿರಲಿ ಅಥವಾ ಮಹದ್ದಿಸ್ ಮೂಲಕ. ವಾಸ್ತವದಲ್ಲಿ ಇದು ನಮ್ಮ ನಬಿ (ಸ) ರವರ ಪ್ರವಾದಿತ್ವ ಹಾಗೂ ಅವರ ಅನುಗ್ರಹವು ಒಬ್ಬ ಸಾದೃಶ್ಯವನ್ನು ಜನ್ಮ ನೀಡಿ ತನ್ನ ಸತ್ಯಕ್ಕೆ ತಾನೇ ಸಾಕ್ಷಿಯನ್ನು ನೀಡುತ್ತದೆ. ವಲಿಗೆ ಉಚಿತವಾಗಿ ಈ ಹೆಸರು ದೊರೆಯುತ್ತದೆ. ವಾಸ್ತವದಲ್ಲಿ ಈ ಪ್ರಕಟಗೊಳ್ಳುವ ಎಲ್ಲಾ ದೃಷ್ಟಾಂತಗಳು ಹಝ್ರತ್ ಪೈಗಂಬರ್(ಸ) ರವರ ಸತ್ಯಕ್ಕಾಗಿಯೇ ಪ್ರಕಟಗೊಳ್ಳುತ್ತಿವೆ. ವಲಿಯ ಹೆಸರು ಅಥವಾ ನಡುವೆ ದೊರೆಯುವ ಹೆಸರು ಯಾವುದೇ ಇರಲಿ, ಯಾರ ಮೂಲಕವೇ ಇರಲಿ, ಅದು ಉಚಿತವಾಗಿ ದೊರೆಯುತ್ತಿವೆ. ಎಂದರೆ ದೃಢೀಕರಿಸುವ ವಲಿಯು ಅವರಿಂದ ಆ ಸೌಂದರ್ಯವನ್ನು ಪಡೆಯುತ್ತಾನೆ. ಅವರಿಗೆ ನಿಮ್ಮಿಂದ ಸೌಂದರ್ಯ ಸಿಗುವುದಿಲ್ಲ. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ-14, ಪುಟ-304-310)

ತನ್ನ ವಾದದ ಕುರಿತು ಅವರು ವಿವರಣೆ ನೀಡುತ್ತಾ ಹೇಳುತ್ತಾರೆ ಅಲ್ಲಾಹನು ಈ ಕಾಲಘಟ್ಟದ ಅವಸ್ಥೆಯನ್ನು ನೋಡಿ ಮತ್ತು ಭೂಮಿಯನ್ನ ತರಹ ತರಹದ ಪಾಪಗಳಿಂದ ತುಂಬಿರುವುದನ್ನು ನೋಡಿ ನನಗೆ ಸತ್ಯಪ್ರಚಾರಕ್ಕಾಗಿ ಮತ್ತು ಸುಧಾರಣೆಗಾಗಿ ನಿಯುಕ್ತಗೊಳಿಸಿದ್ದಾನೆ. ಈ ಕಾಲಘಟ್ಟ ಹೇಗಿತ್ತೆಂದರೆ, ಈ ಲೋಕದ ಜನರು 13ನೇ ಹಿಜರಿಯನ್ನು ಕೊನೆಗೊಳಿಸಿ 14ನೇ ಶತಮಾನ ಪ್ರವೇಶಿಸುತ್ತಿದ್ದರು. ಆಗ ನಾನು ಈ ಆದೇಶದ ನಿಮಿತ್ತ ಸಾರ್ವಜನಿಕರಲ್ಲಿ ಪತ್ರಿಕೆಗಳ ಬರಹ ಮೂಲಕ ಮತ್ತು ಭಾಷಣಗಳ ಮೂಲಕ ಈ ಸಂದೇಶವನ್ನು ನೀಡಲು ಪ್ರಾರಂಭಿಸಿದೆ. ಈ ಶತಮಾನದ ಪ್ರಾರಂಭ ಕಾಲದಲ್ಲಿ ಅಲ್ಲಾಹನ ಕಡೆಯಿಂದ ಯಾವ ಧರ್ಮ ಸುಧಾರಕನು ಬರಬೇಕಾಗಿತ್ತು. ಅದು ನಾನಾಗಿದ್ದೇನೆ. ಭೂಮಿಯಿಂದ ಎತ್ತಲ್ಪಟ್ಟ ನಂಬಿಕೆಯನ್ನು ಪುನಃ ಸ್ಥಾಪಿಸಲು ಮತ್ತು ಅಲ್ಲಾಹನಿಂದ ಶಕ್ತಿಯನ್ನು ಪಡೆದು ಅವನ ಕೈ ಸೆಳತೆದಿಂದ ಲೋಕವನ್ನು ಸುಧಾರಣೆ, ಭಯಭಕ್ತಿ ಮತ್ತು ಸದಾಚಾರದ ಕಡೆ ಸೆಳೆಯಲು ಕಳುಹಿಸಿದ್ದಾನೆ. ಅವರ ಅಪಂಬಿಕೆಗಳನ್ನು ಮತ್ತು ತಪ್ಪು ಆಚಾರಗಳನ್ನು ದೂರ ಮಾಡಲು ನನಗೆ ಕಳುಹಿಸಿದ್ದಾನೆ. ಅನಂತರ ಕೆಲ ವರ್ಷಗಳು ಸಂದಾಗ, ದೈವಿಕ ದಿವ್ಯವಾಣಿಯ ಮೂಲಕ ನನಗೆ ಸ್ಪಷ್ಟಗೊಳಿಸಲಾಯಿತು. ಈ ಜನಾಂಗದಲ್ಲಿ ಒಬ್ಬ ಮಸೀಹನು ಬರುವ ನಂಬಿಕೆ ಪ್ರಾರಂಭದಿಂದಲೇ ಇತ್ತು. ಮತ್ತು ಆ ಕೊನೆಯ ಮಹದಿ ಇಸ್ಲಾಮಿನ ಅಧಃ ಪತನ ಮತ್ತು ಪಥಭ್ರಷ್ಟತೆ ಹರಡಿದಾಗ ನೇರವಾಗಿ ಅಲ್ಲಾಹನಿಂದ ಮಾರ್ಗದರ್ಶನ ಪಡೆದು ಮತ್ತು ಆ ದೈವಿಕ ಆಹಾರವನ್ನು

ಹೊಸದಾಗಿ ಮಾನವಕುಲದ ಮುಂದೆ ಪ್ರಸ್ತುತಪಡಿಸುವನು, ಅಲ್ಲಾಹನ ವಿಧಿಯಲ್ಲಿ ಬರೆಯಲಾಗಿತ್ತು. ಆ ಸುವಾರ್ತೆ ಇಂದಿನಿಂದ 13 ವರ್ಷಗಳ ಮುಂಚೆ ಹಝ್ರತ್ ಪೈಗಂಬರ್(ಸ) ಅವರು ನೀಡಿದ್ದರು. ಅದು ನಾನಾಗಿದ್ದೆನೆ. ದೈವಿಕ ಸಂಭಾಷಣೆ ಮತ್ತು ಸಂಬೋಧನೆ ಯಾವ ಸ್ಪಷ್ಟತೆಯಿಂದ ಮತ್ತು ನಿರಂತರವಾಗಿ ಬಂದಿವೆ ಎಂದರೆ ಅದರಲ್ಲಿ ಯಾವ ಸಂಶಯ ಅನುಮಾನವು ಉಳಿಯಲಿಲ್ಲ. ಪ್ರತಿಯೊಂದು ದಿವ್ಯವಾಣಿಯು ಒಂದು ಕಬ್ಬಿಣದ ಸಲಾಖೆಯಂತೆ ಹೃದಯವನ್ನು ನಾಟುತ್ತಿತ್ತು. ಇವೆಲ್ಲಾ ದೈವಿಕ ಸಂಭಾಷಣೆ ಎಂತಹ ಮಹೋನ್ನತವಾದ ಭವಿಷ್ಯವಾಣಿಗಳಿಂದ ತುಂಬಿದ್ದವು ಎಂದರೆ ಸೂರ್ಯನ ಬೆಳಕಿನಂತೆ ಪೂರ್ಣಗೊಳ್ಳುತ್ತಿದ್ದವು. (ತಝ್ಕಿರತುಶ್ಶಹಾದತೈನ್. ರೂಹಾನಿ ಖಝಾಇನ್, ಸಂಪುಟ–20, ಪುಟ–3–4)

ಮತ್ತು ಅವರು ನುಡಿಯುತ್ತಾರೆ. ಅಂತಹ ಸಮಯದಲ್ಲಿ ದೇವರ ಜ್ಞಾನದ ಬೆಳಕು ಕಡಿಮೆಯಾಗುವ ಸಮಯದಲ್ಲಿ, ಅಂತಿಮವಾಗಿ ಸಾವಿರಾರು ಆತ್ಮಗಳು ವ್ಯಾಮೋಹದ ಕತ್ತಲೆಗಳಲ್ಲಿ ಮರೆಯಾಗುತ್ತವೆ ಎಂದರೆ ನಾಸ್ತಿಕರಂತಾಗುವರು ಮತ್ತು ಭೂಮಿಯು ಪಾಪ ಹಾಗೂ ದ್ವಂದತೆ ತುಂಬಿ ಹೋಗಿರುತ್ತದೆ. ಆಗ ಅಲ್ಲಾಹನ ಗೌರವ, ವೈಭವ ಮತ್ತು ಮರ್ಯಾದೆ ಮತ್ತೊಮ್ಮೆ ತನ್ನನ್ನು ಜನರಲ್ಲಿ ಪ್ರಕಟಗೊಳ್ಳಲು ಇಚ್ಛಿಸುತ್ತದೆ. ಇದು ಪುರಾತನ ಕಾಲದಿಂದ ಬಂದ ವಿಧಿಯಾಗಿದೆ, ನಮ್ಮ ಈ ಕಾಲಘಟ್ಟದಲ್ಲೂ ಅಂತಹುದೇ ಸ್ಥಿತಿ ಹಾಗೂ ಕುರುಹುಗಳು ಕಾಣಿಸಿಕೊಂಡಿವೆ. ಅಲ್ಲಾಹನು ನನಗೆ 14ನೇ ಶತಮಾನದ ನೆತ್ತಿನಲ್ಲಿ ಈ ಧರ್ಮಪುನಶ್ಚೇತನಕ್ಕಾಗಿ ಮತ್ತು ಸೂಕ್ಷ್ಮಜ್ಞಾನ ಪಡೆಯಲು ಕಳುಹಿಸಿದ್ದಾನೆ. ಅವನ ಪರವಾಗಿ ಮತ್ತು ಅನುಗ್ರಹದಿಂದ ನನ್ನ ಹಸ್ತದಿಂದ ದೈವಿಕ ದೃಷ್ಟಾಂತಗಳು ಪ್ರಕಟಗೊಳ್ಳುತ್ತಿವೆ. ಅವನ ಇಚ್ಛೆ ಹಾಗೂ ಬಯಕೆಯಂತೆ ಪ್ರಾರ್ಥನೆಗಳು ಸ್ವೀಕಾರವಾಗುತ್ತಿವೆ. ಮತ್ತು ಅದೃಶ್ಯ ಮಾತುಗಳು ತಿಳಿಸಲಾಗುತ್ತದೆ. ಪವಿತ್ರ ಖುರ್‌ಆನ್‌ನ ಜ್ಞಾನ, ಸಾಕ್ಷ್ಯಗಳು ವಿವರಿಸಿಕೊಡಲಾಗುತ್ತಿದೆ. ಶರಿಯತ್ತಿನ ವ್ಯಾಖ್ಯಾನಗಳು ಮತ್ತು ಸಾಮಿಪ್ಯಗಳ ಪರಿಹಾರ ತಿಳಿಸಲಾಗುತ್ತದೆ. ನನಗೆ ಆ ದೇವವಾಣಿ ಅವನು ಸುಳ್ಳುಗಾರರ ಶತ್ರು ಮತ್ತು ಮಿಥ್ಯವಾದಿಗಳನ್ನು ನಾಶಪಡಿಸುವವನಾಗಿದ್ದಾನೆ. ನಾನು ಅವನ ಕಡೆಯಿಂದ ಬಂದಿರುವೆನು. ಅವನು ಕಳುಹಿಸಿದ ತಕ್ಕ ಸಮಯಕ್ಕೆ ಬಂದಿರುತ್ತೇನೆ. ಅವನ ಆದೇಶದಿಂದ ನಿಂತಿರುತ್ತೇನೆ. ಅವನು ನನ್ನ ಹೆಜ್ಜೆ ಹೆಜ್ಜೆಗೂ ಸಂಗಾತಿಯಾಗಿದ್ದಾನೆ. ಅವನು ನನ್ನನ್ನು ವ್ಯರ್ಥಗೊಳಿಸುವುದಿಲ್ಲ, ನನ್ನ ಜಮಾಅತ್‌ಅನ್ನು ನಾಶಗೊಳಿಸುವುದಿಲ್ಲ, ತಾನು ಇಚ್ಛಿಸಿದ ಎಲ್ಲಾ ಕಾರ್ಯಗಳನ್ನು ಪೂರ್ತಿಗೊಳಿಸುವನು. ಅವನು ನನಗೆ 14ನೇ ಶತಮಾನದ ಆದಿಯಲ್ಲಿ ದೈವಿಕ ಪ್ರಕಾಶದ ಪರಿಪೂರ್ಣತೆಗಾಗಿ ನಿಯುಕ್ತಗೊಳಿಸಿರುವನು. ಅವನು ನನ್ನ ದೃಢೀಕರಣಕ್ಕಾಗಿ ರಂಝಾನಿನಲ್ಲಿ ಚಂದ್ರಗ್ರಹಣ, ಸೂರ್ಯಗ್ರಹಣ ಉಂಟು ಮಾಡಿರುವನು ಮತ್ತು ಭೂಮಿಯಲ್ಲಿ ಹಲವು ಸ್ಪಷ್ಟವಾದ ದೃಷ್ಟಾಂತಗಳನ್ನು ತೋರಿಸುವನು. ಅದು ಸತ್ಯಬಯಸುವವರಿಗೆ ಸಾಕಾಗುತ್ತದೆ. ಈ ರೀತಿ ಅವನು ತನ್ನ ನ್ಯಾಯತೀರ್ಪನ್ನು ಪೂರ್ಣಗೊಳಿಸಿರುವನು. (ಅರ್‌ಬಯೀನ್–2, ರೂಹಾನಿ ಖಝಾಇನ್, ಸಂಪುಟ–17, ಪುಟ 347–348)

ಮತ್ತು ಅವರು ಹೇಳುತ್ತಾರೆ ಅನ್ಯರಿಗೆ ಆಕ್ಷೇಪಪಡುವ ಮತ್ತು ಪ್ರಶ್ನಿಸುವ ಹಕ್ಕಿದೆ. ನಾವು ಹೇಗೆ ವಾಗ್ದತ್ತ ಮಸೀಹನಾಗುವ ವಾದ ಸ್ವೀಕರಿಸಲು ಸಾಧ್ಯ? ಆ ವಾಗ್ದತ್ತ ಮಸೀಹ ನೀವೇ ಎನ್ನಲು ಪುರಾವೆಗಳೇನು? ಕಾಲ ಅದೇ ಆಗಿದೆ ಸರಿ. ಪರಿಸ್ಥಿತಿಗಳು ಹಾಗಿವೆ. ಬೇರೆಲ್ಲ ಕುರುಹುಗಳು ಜಾಹೀರಾಗಿವೆ. ಆದರೆ ನೀವೇ ವಾಗ್ದತ್ತ ಮಸೀಹನೆಂದು ಹೇಗೆ ಗುರುತಿಸಬೇಕು?

ಹೇಳುತ್ತಾರೆ. ಅದರ ಉತ್ತರವೇನೆಂದರೆ ಯಾವ ಕಾಲದಲ್ಲಿ, ಯಾವ ದೇಶದಲ್ಲಿ ಮತ್ತು ಯಾವ ಗ್ರಾಮದಲ್ಲಿ ವಾಗ್ದತ್ತ ಮಸೀಹನು ಬರಲಿಕ್ಕಿದ್ದನು, ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ಸಾಬೀತಾಗುತ್ತದೆ. ಯಾವ ಗುಣಗಳು ಮಸೀಹರ ಅಸ್ತಿತ್ವಕ್ಕೆ ಕಾರಣ ಎಂದು ಹೇಳಲಾಗಿತ್ತು. ಮತ್ತು ಯಾವ ಲೌಕಿಕ ಘಟನೆಗಳು ದೈವಿಕ ಘಟನೆಗಳನ್ನು ವಾಗ್ದತ್ತ ಮಸೀಹರ ಆಗಮನಕ್ಕೆ ಕಾರಣ ಎಂಬ ಕುರುಹುಗಳು ವಿವರಿಸಲಾಗಿತ್ತು. ಯಾವ ಜ್ಞಾನ ಮತ್ತು ಸೂಕ್ಷ್ಮಜ್ಞಾನವನ್ನು ವಾಗ್ದತ್ತ ಮಸೀಹರ ವೈಶಿಷ್ಟ್ಯತೆ ಎಂದು ಹೇಳಲಾಗಿತ್ತು. ಅವೆಲ್ಲಾ ಅಲ್ಲಾಹನು ನನ್ನಲ್ಲಿ ಮತ್ತು ನನ್ನ ಕಾಲಘಟ್ಟದಲ್ಲಿ ಹಾಗೂ ನನ್ನ ನಾಡಿನಲ್ಲಿ ಕ್ರೂಢೀಕರಿಸಿದ್ದಾನೆ. ಘಟನೆಗಳು ಸಂಭವಿಸುತ್ತಿವೆ, ರೋಗಗಳು ಬರುತ್ತಿವೆ, ಭೂಕಂಪನಗಳು ಆಗುತ್ತಿವೆ, ದೈವಿಕ ದೃಷ್ಟಾಂತಗಳು ಸಹ ಪೂರ್ತಿಗೊಳ್ಳುತ್ತಿವೆ. ನನ್ನ ವಾದವು ಪ್ರಸ್ತುತವಿದೆ. ಅಲ್ಲಾಹನು ನನ್ನ ಹಸ್ತದಿಂದ ದೃಷ್ಟಾಂತಗಳು ತೋರಿಸುತ್ತಿದ್ದಾನೆ. ಹೀಗಿರುವಾಗ ನೀವು ಹೇಗೆ ಹೇಗೆ ಹೇಳುತ್ತೀರಿ. ಅದು ನಾನಲ್ಲ ಎಂದು? ಇದೇ ಪುರಾವೆಗಳಾಗಿವೆ. ಆ ಎಲ್ಲ ಮಾತುಗಳು ಅಲ್ಲಾಹನು ನನ್ನಲ್ಲಿ, ನನ್ನ ಕಾಲಘಟ್ಟದಲ್ಲಿ ಮತ್ತು ನನ್ನ ನಾಡಿನಲ್ಲಿ ಒಟ್ಟುಗೊಳಿಸಿದ್ದಾನೆ. ಮತ್ತಷ್ಟು ಸಮಾಧಾನಕ್ಕಾಗಿ ದೈವಿಕ ಸಹಕಾರ ನನ್ನ ಪರವಾಗಿದೆ. (ಕಿತಾಬುಲ್ ಬರಿಯ್ಯ, ರೂಹಾನಿ ಖಝಾಇನ್, ಸಂಪುಟ–13, ಪುಟ–254–255) ದೈವಿಕ ಪುಷ್ಟಿ ನಿಮಿತ್ತ ಧೂಮಕೇತು, ಸೂರ್ಯಗ್ರಹಣ, ಚಂದ್ರಗ್ರಹಣ, ಪ್ಲೇಗ್, ಹರಡುವಿಕೆ, ಭೂಕಂಪನಗಳ ಬರುವಿಕೆ ಇತ್ಯಾದಿ ಹಲವು ವಿಷಯಗಳಿವೆ. ಸಂಘಟನೆಯ ಪ್ರಗತಿಯ ಕುರಿತು ಭವಿಷ್ಯವಾಣಿ ಮತ್ತು ದೃಷ್ಟಾಂತಗಳು, ದೈವಿಕ ಸಮರ್ಥನೆ ವಿವರಿಸುತ್ತ ಅವರು ಹಲವು ಮಾತುಗಳನ್ನು ವಿವರಿಸಿದರು. ಅವರು ಮೇರು ಕೃತಿಗಳನ್ನು ಬರೆದಿರುವರು, ಈ ಕುರಿತು ನಾನು ಈ ಮೊದಲೇ ಹೇಳಿದಂತೆ ಒಂದೆರಡು ಮಾತುಗಳನ್ನು ಪ್ರಸ್ತುತ ಪಡಿಸಬಯಸುತ್ತೇನೆ.

ಅವರು(ಅ) ಹೇಳುತ್ತಾರೆ. ಒಂದು ಮಹೋನ್ನತವಾದ ದೃಷ್ಟಾಂತವೇನೆಂದರೆ ಇಂದಿಗೆ 23 ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ಈ ದಿವ್ಯವಾಣಿ ಪ್ರಸ್ತುತವಿದೆ. ಜನರು ಈ ಸಂಘಟನೆಯನ್ನು ಮಟ್ಟ ಹಾಕಲು ಪ್ರಯತ್ನಿಸುವರು. ಇಂದಿನವರೆಗೂ ಪ್ರಯತ್ನಪಡುತ್ತಿದ್ದಾರೆ. ಒಂದು ನೂರ ಮುವತ್ತು ಮೂವತ್ತೆರಡು ವರ್ಷಗಳು ಸಂದಿವೆ. ಪ್ರತಿಯೊಂದು ಕುತಂತ್ರ ಕೈಗೊಳ್ಳುವವರು. ಆದರೆ ನಾನು ಸಂಘಟನೆಯುನ್ನು ಬಲಪಡಿಸುವೆನು." ಅಲ್ಲಾಹನು ಹೇಳುತ್ತಾನೆ. ಪರಿಪೂರ್ಣಗೊಳಿಸುವೆನು. ಅದೊಂದು ಸೈನ್ಯವಾಗುವುದು ಅಂತ್ಯ ತೀರ್ಮಾನ ದಿನದವರೆಗೂ ವಿಜಯಿಯಾಗಿರುವುದು. ನಾನು ನಿನ್ನ ಹೆಸರನ್ನು ಲೋಕದ ಎಲ್ಲೆಡೆಯವರೆಗೂ ಖ್ಯಾತಿ ನೀಡುವೆನು. ಗುಂಪು ಗುಂಪಾಗಿ ಜನರು ದೂರ ದೂರದಿಂದ ಬರುವರು ಮತ್ತು ಎಲ್ಲಾ ಕಡೆಯಿಂದಲೂ ಸಾಂಪತ್ತಿಕ ಸಹಾಯ ಒದಗಿ ಬರುವುದು. ಮನೆಗಳನ್ನು ವಿಶಾಲವಾಗಿರಿಸಿರಿ. ಅದರ ಸಿದ್ಧತೆ ಆಕಾಶದಲ್ಲಿ ನಡೆಯುತ್ತಿದೆ. ಈಗ ನೋಡಿ, ಇದು ಅಲ್ಲಾಹನ ದೃಷ್ಟಾಂತಗಳಾಗಿವೆ. ಕಾಣುವ ಕಣ್ಣು ಇದ್ದವರು ಕಾಣುತ್ತಿದ್ದಾರೆ. ಆದರೆ ಅಂಧರಾದವರ ಮುಂದೆ ಇಲ್ಲಿಯವರೆಗೂ ಯಾವ ದೃಷ್ಟಾಂತವು ಪ್ರಕಟಗೊಂಡಿಲ್ಲ."
(ನುಝೂಲುಲ್ ಮಸೀಹ್ ರೂಹಾನಿ, ಖಝಾಇನ್, ಸಂಪುಟ–18, ಪುಟ 384–385)

ನಾನು ಹೇಳಿದಂತೆ ಇದು ತುಂಬಾ ದೀರ್ಘ ವಿವರಗಳನ್ನು ಒಳಗೊಂಡಿದೆ. ಕೆಲವೇ ದೃಷ್ಟಾಂತಗಳನ್ನು ಇಲ್ಲಿ ವಿವರಿಸುತ್ತಿದ್ದೇನೆ. ಶೈಕ್ಷಣಿಕ ದೃಷ್ಟಾಂತಗಳು, ದೈವಿಕ ದೃಷ್ಟಾಂತಗಳ ಬಗ್ಗೆ ಅವರು ಹೇಳುತ್ತಾರೆ. ಒಂದು ಸಂದರ್ಭದಲ್ಲಿ ಓರ್ವ ಹಿಂದೂ ಸಾಹಿಬರು ಖಾದಿಯಾನಿಯಲ್ಲಿ ನನ್ನ ಬಳಿ ಬಂದರು. ಅವರ ಹೆಸರು ನೆನಪಿಲ್ಲ. ಅವರು ಬರೆಯುತ್ತಾರೆ. (ನೆನಪಿಗೆ ಬಂತು ಅವರ ಹೆಸರು ಸ್ವಾಮಿ ಶುಗನ್‌ಚಂದ್ರ ಎಂದಿತ್ತು) ನಾನು ಒಂದು ಧಾರ್ಮಿಕ ಸಮ್ಮೇಳನ (ಈ ಸಮ್ಮೇಳನದ ಹೆಸರು 'ಧರ್ಮ ಮಹೋತ್ಸವ, ಜಲ್ಸ ಆಝುಂ ಮಝಾಹಿಬ್ ಹೆಸರಿನಿಂದ ಪ್ರಚುರಪಡಿಸಲಾಯಿತು.) ಆಯೋಜಿಸ ಬಯಸುತ್ತೇನೆ. ನೀವು ಸಹ ತಮ್ಮ ಧರ್ಮದ ಗುಣಗಳ ಕುರಿತು ಪ್ರಬಂಧ ಬರೆಯಬೇಕು, ಅದನ್ನು ಈ ಸಮ್ಮೇಳನದಲ್ಲಿ ಓದಬಹುದು. ನಾನು ಹಿಂದೆ ಮುಂದೆ ನೋಡಿದೆ. ಆದರೆ ಅವರು ತುಂಬಾ ಒತ್ತಾಯ ಮಾಡಿದರು. ನೀವು ಬರೆಯಲೇ ಬೇಕು ಎಂದು. ನಾನು ವೈಯಕ್ತಿಕ ಶಕ್ತಿಯಿಂದ ಏನು ಮಾಡಲಾರೆ. ಎಂಬುದು ನಾನು ಬಲ್ಲೆ. ನನ್ನಲ್ಲಿ ಯಾವ ಶಕ್ತಿಯೂ ಇಲ್ಲ. ನಾನು ಅಲ್ಲಾಹನು ಹೇಳಲು ಬಯಸದೆ ಏನು ಹೇಳಲಾರೆ. ಮತ್ತು ಅವನು ತೋರಿಸದೆ ಏನೂ ಕಾಣಲು ಸಾಧ್ಯವಿಲ್ಲ. ಆದುದರಿಂದ ನಾನು ದೇವನ ಆಸ್ಥಾನದಲ್ಲಿ ಹೀಗೆ ಪ್ರಾರ್ಥಿಸಿದೆ. ನನಗೆ ಅವನು ಆ ಸಮ್ಮೇಳನದಲ್ಲಿ ಎಲ್ಲಾ ಭಾಷಣಗಾರರ ಮೇಲೆ ವಿಜಯಿಯಾಗುವಂತಹ ಪ್ರಬಂಧ ಬರೆಯಲು ದಯಪಾಲಿಸಲಿ. ಪ್ರಾರ್ಥನೆಯ ನಂತರ ನೊಡುತ್ತಿದ್ದೇನೆ. ನನ್ನಲ್ಲಿ ಒಂದು ಅಪ್ರತಿಮ ಶಕ್ತಿ ದಯಪಾಲಿಸಲಾಗಿದೆ. ನಾನು ಆ ದೈವಿಕ ಶಕ್ತಿಯ ಒಂದು ಪ್ರೇರಣೆ ತನ್ನೊಳಗೆ ವ್ಯಕ್ತವಾಯಿತು. ಆ ಸಮಯ ಅಲ್ಲಿ ಹಾಜರಿದ್ದ ಗೆಳೆಯರು ಬಲ್ಲರು. ಆ ಪ್ರಬಂದದ ಯಾವ ಸಿದ್ಧತೆಯಾಗಿರಲಿಲ್ಲ. ಬರೆಯಲು ಪ್ರಾರಂಭಿಸಿದಾಗ ನನ್ನ ಲೇಖನಿ ಎಂತಹ ವೇಗವಾಗಿ ಶೀಘ್ರತೆಯಿಂದ ಬರೆದುಕೊಂಡು ಹೋಗುತ್ತಿದ್ದೆಂದರೆ ನಕಲು ಮಾಡುವವರಿಗೆ ಅಷ್ಟು ವೇಗವಾಗಿ ಬರೆಯಲು ಕಠಿಣವಾಗುತ್ತಿತ್ತು. ಆ ಪ್ರಬಂಧ ಮುಗಿಸಿದ ನಂತರ ಅಲ್ಲಾಹನ ಕಡೆಯಿಂದ ಈ ದಿವ್ಯವಾಣಿಯಾಯಿತು. "ಪ್ರಬಂಧ ವಿಜಯಿಯಾಗಿದೆ". ಸಂಕ್ಷಿಪ್ತವಾಗಿ ಹೇಳುವುದೇನೆಂದರೆ ಆ ಪ್ರಬಂಧ ಆ ಸಮ್ಮೇಳನದಲ್ಲಿ ಓದಲಾಯಿತು. ಓದುವ ಸಮಯ ಸಭಿಕರ ಮೇಲೆ ಒಂದು ಆಧ್ಯಾತ್ಮಿಕ ಪ್ರಭಾವ ಉಮ್ಮಡಿಸುವಂತೆ ಕಾಣುತ್ತಿತ್ತು. ಎಲ್ಲ ಕಡೆಯಿಂದ ಪ್ರಶಂಸಿಸುವ ಧ್ವನಿ ಮೊಳಗುತ್ತಿತ್ತು. ಎಲ್ಲಿಯವರೆಗೆಂದರೆ ಅಧ್ಯಕ್ಷರಾಗಿದ್ದ ಆ ಹಿಂದೂ ಸಾಹಿಬರು ಆ ಸಮ್ಮೇಳನದಲ್ಲಿದ್ದರು. ಅವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಳನ ಜರುಗುತ್ತಿತ್ತು. ಅವರ ಬಾಯಿಯಿಂದಲೂ ಆಕಸ್ಮಾತ್ತಾಗಿ ಹೊರಡಿತು. ಈ ಪ್ರಬಂಧ ಎಲ್ಲಾ ಪ್ರಬಂಧಗಳ ಮೇಲೆ ವಿಜಯ ಸಾಧಿಸಿದೆ. ಸಿವಿಲ್ ಮತ್ತು ಮಿಲಿಟರಿ

ಗೆಜೆಟ್ ಲಾಹೋರಿನಿಂದ ಒಂದು ಆಂಗ್ಲ ಪತ್ರಿಕೆ ಹೊರಡುತ್ತಿತ್ತು. ಅದು ಸಹ ಸಾಕ್ಷ್ಯ ರೂಪದಲ್ಲಿ ಪ್ರಕಟಿಸಿದೆ. ಈ ಪ್ರಬಂಧ ವಿಜಯಿಯಾಗಿದೆ. ಬಹುಶಃ ಇಪ್ಪತ್ತರ ಸಮೀಪ ಉರ್ದು ಪತ್ರಿಕೆಗಳಿರಬಹುದು. ಅವರುಗಳೂ ಸಹ ಅದೇ ಸಾಕ್ಷ್ಯ ನಿಡಿದೆ. ಈ ಸಮ್ಮೇಳನದಲ್ಲಿ ಕೆಲವೇ ಕೆಲವು ದ್ವೇಷಿಸುವ ಜನರನ್ನು ಬಿಟ್ಟರೆ ಎಲ್ಲರ ಅಭಿಮತವಾಗಿತ್ತು. ಈ ಪ್ರಬಂಧ ವಿಜಯಿಯಾಗಿದೆ. ಇಂದಿನವರೆಗೂ ನೂರಾರು ಜನರು ಇದೇ ಸಾಕ್ಷಿ ನೀಡುವವರು ಪ್ರಸ್ತುತವಿದ್ದಾರೆ." ಇಂದೂ ಸಹ ಈ ಕಾಲದಲ್ಲೂ ವಿದ್ಯಾವಂತ ಜನರು ಅಹ್ಮದಿಯತ್ ಸ್ವೀಕರಿಸುತ್ತಿದ್ದಾರೆ. ಅಂತಹ ಎಲ್ಲ ವರ್ಗಗಳ ಸಾಕ್ಷಿ ಮತ್ತು ಆಂಗ್ಲ ಪತ್ರಿಕೆಗಳ ಸಾಕ್ಷಿಯಿಂದ "ನನ್ನ ಪ್ರಬಂಧ ವಿಜಯಿಯಾಗಿದೆ." ಎಂಬ ಭವಿಷ್ಯವಾಣಿ ಪೂರ್ಣಗೊಂಡಿದೆ. ಈ ಸ್ಪರ್ಧೆ ಮುಸಾ ನಬಿ ಜಾದೂಗಾರರ ಮುಂದೆ ನಡೆಸಿದ ಸ್ಪರ್ಧೆಯಂತಿತ್ತು. ಏಕೆಂದರೆ ಈ ಸಮ್ಮೇಳನದಲ್ಲಿ ವಿವಿಧ ಮತಗಳ ಜನರು ತನ್ನ ತನ್ನ ಧರ್ಮಗಳ ಬಗ್ಗೆ ಭಾಷಣಗಳನ್ನು ಪ್ರಸ್ತುತಪಡಿಸಿದರು. ಅವರಲ್ಲಿ ಕ್ರೈಸ್ತರೂ ಇದ್ದರು. ಕೆಲವು ಸನಾತನ ಧರ್ಮದವರೂ ಇದ್ದರು. ಕೆಲ ಆರ್ಯ ಸಮಾಜದವರೂ ಇದ್ದರು. ಕೆಲ ಬ್ರಹ್ಮಸಮಾಜದವರು, ಸಿಖ್ಖರು ಮತ್ತು ನಮ್ಮ ವಿರೋಧಿ ಮುಸಲ್ಮಾನರು ಸಹ ಇದ್ದರು. ಎಲ್ಲರೂ ತಮ್ಮ ಕಾಲ್ಪನಿಕ ಸರ್ಪಗಳನ್ನು ಸೃಷ್ಟಿಸಿದರು ಆದರೆ ಅಲ್ಲಾಹನು ನನ್ನ ಹಸ್ತದಿಂದ ಇಸ್ಲಾಮಿ ಸದಾಚಾರದ ಕೋಲು ಒಂದು ಪವಿತ್ರ ಹಾಗೂ ಸೂಕ್ಷ್ಮ ಜ್ಞಾನಭರಿತ ಭಾಷಣ ರೂಪವಾಗಿ ಅವರ ಎದುರು ಬಿಟ್ಟಾಗ ಅದು ಹೆಬ್ಬಾವು ಆಗಿ ಎಲ್ಲರನ್ನು ನುಂಗಿಬಿಟ್ಟಿತು. ಇಲ್ಲಿಯತನಕ ಸಮುದಾಯಗಳಲ್ಲಿ ನನ್ನ ಭಾಷಣದ ಕುರಿತು ಪ್ರಶಂಸೆಯ ಚರ್ಚೆ ನಡೆಯುತ್ತಿವೆ. ಅದು ನನ್ನ ಬಾಯಿಯಿಂದ ಹೊರಟಿತ್ತು. **ಫಲ್‌ಹಮ್ದು ಲಿಲ್ಲಾಹಿ ಅಲಾ ಝಾಲಿಕ್**. (ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–291–292, ಅಡಿಟಿಪ್ಪಣಿಯೊಂದಿಗೆ)

ಇನ್ನೊಂದು ಭವಿಷ್ಯವಾಣಿಯ ವಿವರ ನೀಡುತ್ತಾ ಹೇಳುತ್ತಾರೆ. ಇದು ದೈವಿಕ ದೃಷ್ಟಾಂತವಾಗಿದೆ. ಅದರ ವಿವರ ಬರಾಹೀನ್ ಅಹ್ಮದಿಯಾದಲ್ಲಿದೆ. ಅದೇನೆಂದರೆ– **ಯಾ ಅಹ್ಮದು ಫಾಝುತಿಕ್ ರಹಮತು ಅಲಾ ಶಫತೈಕ**. ಓ ಅಹ್ಮದ್ ವಾಗ್ ವೈಕರಿ ವಾಕ್ಚಾತುರ್ಯಗಳ ಸರೋವರಗಳು ನಿನ್ನಿಂದ ಜಾರಿಯಾದವು. ಅದರ ದೃಢೀಕರಣ ಹಲವು ವರ್ಷಗಳಿಂದಲೂ ಆಗುತ್ತಿವೆ. ಹಲವು ಗ್ರಂಥಗಳು ಅರಬಿ ವಾಕ್ಚಾತುರ್ಯದಲ್ಲಿ ರಚಿಸಿ ಸಾವಿರಾರು ರೂಪಾಯಿಗಳ ಬಹುಮಾನದೊಂದಿಗೆ ಇಸ್ಲಾಮಿನ ಉಲಮಾಅಗಳ ಮತ್ತು ಕ್ರೈಸ್ತರ ಮುಂದೆ ಪ್ರಸ್ತುತಪಡಿಸಲಾಯಿತು. ಆದರೆ ಯಾರೂ ಸಹ ತಲೆ ಎತ್ತಲಿಲ್ಲ. ಮತ್ತು ಎದುರಿಗೆ ಬರಲಿಲ್ಲ. ಇದು ದೈವಿಕ ದೃಷ್ಟಾಂತವಾಗಿದೆಯೋ ಅಥವಾ ಮನುಷ್ಯನ ಪ್ರತಾಪ. (ಅನುಬಂಧ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–290–291) ಜನರು ಮತನಾಡುತ್ತಾರೆ. ಇಂದೂ ಸಹ ಮಾತನಾಡುತ್ತಿದ್ದಾರೆ. ಆದರೆ ಆ ಸಮಯವಂತೂ ಯಾರು ಎದುರಿಗೆ ಬರಲಿಲ್ಲ.

ಮತ್ತು ಪ್ರಾರ್ಥನೆಯ ಸ್ವೀಕೃತುಯ ದೃಷ್ಟಾಂತದ ರೂಪವಾಗಿ ಪ್ರಾರ್ಥನೆಯ ಸ್ವೀಕಾರದ ಒಂದು ಘಟನೆ ವಿವರಿಸುತ್ತಾರೆ. ನಿಸ್ಸಂದೇಹವಾಗಿ ಅಸಂಖ್ಯಾತ ಘಟನೆಗಳಿವೆ. ನಾನು ಒಂದನ್ನು ಪ್ರಸ್ತುತಪಡಿಸುತ್ತಿದ್ದೇನೆ. ಆ ಕಾಲದಲ್ಲಿ ಪ್ರಕಟಗೊಂಡ ದೃಷ್ಠಂತವು ಪ್ರಾರ್ಥನೆಯ ಸ್ವೀಕಾರದ ಬಗ್ಗೆ ಆಗಿದೆ. ಅದು ಮೃತ್ಯುವಿನ ಮೇಲೆ ವಿಜಯ ಸಾಧಿಸಿದಂತೆ ಇದೆ. ಅದರ ಸಂಪೂರ್ಣ ವಿವರ ಹೀಗಿದೆ. ಅಬ್ದುಲ್‌ಕರೀಂ ಹೆಸರು, ತಂದೆ ಅಬ್ದುರ್ರಹ್ಮಾನ್ ಹೈದರಾಬಾದ್ ದಖನ್ ನಿವಾಸಿ, ನಮ್ಮ ಮದರಸದಲ್ಲಿ ಒಬ್ಬ ವಿದ್ಯಾರ್ಥಿ, ವಿಧಿಯನ್ವಯ ಅವನಿಗೆ ಹುಚ್ಚು ನಾಯಿ ಕಡಿಯಿತು. ನಾವು ಅವನ ಚಿಕಿತ್ಸೆಗಾಗಿ ಕಸೋಲಿ ಕಳುಹಿಸಿದೆವು. ಕೆಲ ದಿನಗಳವರೆಗೆ ಕಸೋಲಿಯಲ್ಲಿ ಚಿಕಿತ್ಸೆ ನಡೆಯಿತು. ಮತ್ತೆ ಅವನು ಖಾದಿಯಾನಿಗೆ ಮರಳಿ ಬಂದನು. ಕೆಲವು ದಿನಗಳ ನಂತರ ಮತ್ತೆ ಅವನಲ್ಲಿ ಹುಚ್ಚುತನದ ಚಿಹ್ನೆಗಳು ಗೋಚರಿಸಿದವು. ಅದು ಹುಚ್ಚು ನಾಯಿ ಕಡಿತದಿಂದ ಉಂಟಾಗುತ್ತವೆ. ನೀರು ನೋಡಿ ಹೆದರತೊಡಗಿದ ಸ್ಥಿತಿ ಗಂಭೀರವಾಯಿತು. ಆಗ ಆ ಪರದೇಶಿಯ ಮೇಲೆ ನನಗೆ ಮರುಕ ಹುಟ್ಟಿದಂತಾಯಿತು. ಅವನಿಗಾಗಿ ಪ್ರಾರ್ಥನೆಯ ಒಂದು ವಿಶೇಷ ಆಸಕ್ತಿ ಮೂಡಿತು. ಪ್ರತಿಯೊಬ್ಬರು ಆ ವ್ಯಕ್ತಿ ಕೆಲವು ಗಂಟೆಗಳಲ್ಲಿ ಸಾಯಬಹುದು ಅನ್ನುತ್ತಿದ್ದರು. ನಿರ್ವಾಹವಿಲ್ಲದೇ ಅವನಿಗೆ ಬೋರ್ಡಿಂಗ್‌ನಿಂದ ಹೊರಗೆ ಬಂದು ಪ್ರತ್ಯೇಕ ಮನೆಯಲ್ಲಿ ಇರಿಸಿದರು. ಕಸೋಲಿಯ ಬ್ರಿಟಿಷ್ ವೈದ್ಯರಿಗೆ ತಂತಿ ಸಂದೇಶ ಮೂಲಕ ಕೇಳಲಾಯಿತು. ಅವನಿಗಾಗಿ ಏನಾದರೂ ಚಿಕಿತ್ಸಾ ಕ್ರಮವಿದೆಯೇ ಎಂದು. ಅಲ್ಲಿಂದ ಉತ್ತರ ಬಂತು. ಈಗ ಅವನಿಗಾಗಿ ಯಾವ ಚಿಕಿತ್ಸೆಯೂ ಇಲ್ಲ. ನನ್ನ ಮನಸ್ಸಿನಲ್ಲಿ ಕಳವಳ ಉಮಟಾಯಿತು. ನನ್ನ ಮಿತ್ರರು ಸಹ ಅವನ ಕುರಿತು ದುಆ ಮಾಡಲು ಪ್ರೇರೇಪಿಸಿದರು. ಏಕೆಂದರೆ ಆ ಬಡವನ ಸ್ಥಿತಿ ಕರುಣಾಜನಕವಾಗಿತ್ತು. ನನ್ನ ಮನಸ್ಸಿನಲ್ಲಿಯೂ ಭಯ ಉಂಟಾಯಿತು. ಒಂದು ವೇಳೆ ಇವನು ತೀರಿ ಹೋದರೆ ನಮ್ಮ ವಿರೋಧಿಗಳು ಕೆಟ್ಟ ರೀತಿಯಲಿ ಬಳಸಿಕೊಲ್ಲುವರು. ಆಗ ನನ್ನ ಮನಸ್ಸಿನಲ್ಲಿ ತುಂಬ ಕಳವಳ ಅಸಮಾಧಾನ ಉಂಟಾಯಿತು. ಮತ್ತು ಅಸಾಮಾನ್ಯ ರೀತಿಯ ಗಮನಹರಿಸಿದಂತಾಯಿತು. ಅದು ನನ್ನದ್ದಾಗದೇ ದೇವನಾಗ್ರಹದಂತಿತ್ತು. ಇಂತಹ ಸ್ಥಿತಿ ಅಲ್ಲಾಹನ ಅನುಗ್ರಹದಿಂದ ಉಂಟಾಗುತ್ತದೆ ಆಗ ಆ ಮೃತನನ್ನು ಜಿವಂತಗೊಳಿಸಲು ಪ್ರಾರ್ಥನೆಯ ಮೊರೆ ಹೋದೆ. ಅವನ ಸ್ಥಿತಿ ಮೃತನಂತೆಯೇ ಇತ್ತು. ಅವನು ನೀರಿನಿಂದ ಮತ್ತು ಬೆಳಕಿನಿಂದ ಹೆದರಿ ಓಡಿ ಹೋಗುತ್ತಿದ್ದ. ತಕ್ಷಣದಿಂದಾಗಿ ಸ್ಥಿತಿ ಪಲ್ಲಟಗೊಂಡಿತು. ಈಗ ಆರೋಗ್ಯವಾಯಿತು. ಅವನು ಹೇಳಿದ. ಈಗ ನನಗೆ ನೀರಿನಿಂದ ಹೆದರಿಕೆ ಆಗುತ್ತಿಲ್ಲ. ಅಗ ಅವನಿಗೆ ಕೊಡಲಾಯಿತು. ಅವನು ಏನೂ ಹೆದರಿಕೆಯಿಲ್ಲದೇ ನೀರು ಕುಡಿದನು. ಅಲ್ಲದೇ ನೀರಿನಿಂದ ವುಝು ಮಾಡಿ ನಮಾಝ್ ನಿರ್ವಹಿಸಿದನು. ರಾತ್ರಿಯೆಲ್ಲ ಸರಿಯಾಗಿ ನಿದ್ರೆ ಮಾಡಿದನು. ಮತ್ತು ಎಲ್ಲ ರೀತಿಯ ಹುಚ್ಚುತನ ಹಾಗೂ ಭಯ ದೂರವಾಯಿತು. ಕೆಲ ದಿನಗಳ ನಂತರವೇ ಪರಿಪೂರ್ಣ ಆರೋಗ್ಯದಂತನಾದನು. ನನ್ನ ಮನಸ್ಸಿನಲ್ಲಿ ಹಾಕಲಯಿತು.ಈ ಹಚ್ಚುತನದ ಸ್ಥಿತಿ ಅವನನ್ನು ನಾಶಗೊಳಿಸಲು ಆಗಿರಲಿಲ್ಲ. ಬದಲು ಅಲ್ಲಾಹನ ದೃಷ್ಟಾಂತಕ್ಕಾಗಿ ಈ ಸ್ಥಿತಿ ಉಂಟಾಗಿತ್ತು. ಅನುಭವಸ್ಥರು ಹೇಳುತ್ತಾರೆ. ಲೋಕದಲ್ಲಿ ಎಂದೂ ಇಂತಹ ಘಟನೆ ಕಂಡು ಬಂದದ್ದಲ್ಲ ಒಬ್ಬನಿಗೆ ಹುಚ್ಚು ನಾಯಿ ಕಚ್ಚಿರಬೇಕು ಮತ್ತು ಅವನಲ್ಲಿ ಹುಚ್ಚಿನ ಪ್ರಭಾವ ಬಂದಿರಬೇಕು ಇಂತಹ ಅವಸ್ಥೆಯಲ್ಲಿ ಒಬ್ಬ ವ್ಯಕ್ತಿ ಗುಣಪಡೆದಿರಬೇಕು. ಕಸೂಲಿಯ ತಜ್ಞರು ಸಹ ನಮ್ಮ ತಂತಿ ಸಂದೇಶದಲ್ಲಿ ಉತ್ತರ ನಿಡಿದ್ದರು ಮತ್ತು ಸ್ಪಷ್ಟವಾಗಿ ಬರೆದಿದ್ದರು. "ಈಗ ಯಾವ ಚಿಕಿತ್ಸೆಯೂ ಸಾಧ್ಯವಿಲ್ಲ." (ಹಖೀಖತುಲ್ ವಹೀ, ರೂಹಾನಿ ಖಝಾಈನ್, ಸಂಪುಟ–22, ಪುಟ–239)

ಮತ್ತೆ ಡೋಯಿಯ ದೃಷ್ಟಾಂತದ ಬಗ್ಗೆ ಅವರು(ಅ) ಹೇಳುತ್ತಾರೆ: ಅಲ್ಲಾಹನ ಸಹಾಯ ಯಾವ ರೀತಿಯಲ್ಲಿ ನನ್ನೊಂದಿಗೆ ಇದೆ.

ತತ್ವಧಾರಿಗಳ ರೀತಿಯಲ್ಲಿ ನೋಡಿದರೆ ನಾನು ನಾಶಹೊಂದಬೇಖಿತ್ತು ಏಕೆಂದರೆ ಎಲ್ಲಾ ದುಷ್ಟಾಂತಗಳು ನನ್ನಲ್ಲಿವೆ. ನನ್ನ ಮೇಲೆ ಸಿಡಿಲು ಬಡಿಬೇಖಿತ್ತು. ನಿಮಗೆಲ್ಲ ನನ್ನ ವಿರೋಧವಾಗಿ ನಿಲ್ಲುವ ಅವಶ್ಯಕತೆಯಿರಲಿಲ್ಲ. ಏಕೆಂದರೆ ಅಪರಾದಿಗಳಿಗೆ ಸ್ವಯಂ ಅಲ್ಲಾಹನು ಶತ್ರುವಾಗಿದ್ದಾನೆ. ನಾನು ಅಪರಾದಿಯಾಗಿರುತ್ತಿದ್ದರೆ ಸ್ವಯಂ ಅಲ್ಲಾಹನು ನನ್ನ ಶತ್ರುವಾಗುತ್ತಿದ್ದ. ಅಲ್ಲಾಹನು ಲೋಕದಲ್ಲಿ ದಂಗೆ ಅಂತೂ ಬಯಸುವುದಿಲ್ಲ. ಆದುದರಿಂದ ದೇವನಿಗೋಸ್ಕರ ತುಸು ಯೋಚಿಸಿರಿ. ವಿಪರೀತ ಪರಿಣಾಮ ಏಕೆ ಉಂಟಾಯಿತು. ಏಕೆ ನನ್ನ ಎದುರು ಸಜ್ಜನರು ಮೃತಪಟ್ಟರು. ಪ್ರತಿಯೊಂದು ಪರೀಕ್ಷೆಯಲ್ಲಿ ಅಲ್ಲಾಹನು ಏಕೆ ನನ್ನನ್ನು ಸಂರಕ್ಷಿಸಿದನು. ಇದರಿಂದ ನನ್ನ ಪವಾಡ ಸಾಬೀತಾಗುವುದಿಲ್ಲವೇ? ನೀವು ಈ ಆರೋಪಗಳೆಲ್ಲ ಹೊರಿಸುವುದು ಸಹ ಒಂದು ಪವಾಡವೇ ಆಗಿದೆ. ಇದರಿಂದಲೂ ನನ್ನ ಸತ್ಯ ಸಾಬೀತಾಗುತ್ತದೆ. ಆದುದರಿಂದ ಇದು ಕೃತಜ್ಞತೆಯ ಮಾತಾಗಿದೆ. ಏನೆಲ್ಲ ಆ ದುಷ್ಕರ್ಮಗಳ ಆರೋಪ ನನ್ನ ಮೇಲೆ ಮಾಡುತ್ತಿರಿ. ಅದರಿಂದ ನನ್ನ ಶ್ರೇಷ್ಠತೆಯೇ ಸಾಬೀತಾಗುತ್ತದೆ. (ಹಕೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–2)

ಅಂತೂ ಈ ಕೆಲ ಉದಾಹರಣೆಗಳು ಮತ್ತು ಮಾತುಗಳು ನಾನು ಮಸೀಹ್ ಮೌಊದ್(ಅ) ಅವರ ಆಧಾರಗಳಿಂದ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದೇನೆ. ಅಕಟಕಟಾ. ವಿರೋಧಿಗಳು ಅವರ ಪುಸ್ತಕಗಳನ್ನು ಓದಬೇಕು. ಅವರ ಜೊತೆಗಿರುವ ಅಲ್ಲಾಹನ ಸಹಾಯ ಮತ್ತು ದೃಷ್ಟಾಂತಗಳನ್ನು ನೊಡಬೇಕು. ಅದು ಪುಟಗಲಲ್ಲೆಲ್ಲ. ನಾನು ಹೇಳಿದಂತೆ ಅನೇಕ ಪುಸ್ತಕಗಳನ್ನು ಒಳಗೊಂಡಿರುತ್ತದೆ. ಕಾಲದ ಅಗತ್ಯವನ್ನು ನೋಡಿ. ಅಲ್ಲದೇ ಸಮಯದ ಅಗತ್ಯಕ್ಕೆ ಅನುಗುಣವಾಗಿ ಈ ಯುಗವು ಒಬ್ಬ ಸುಧಾರಕ ಮತ್ತು ಮಹದಿಯನ್ನು ಬಯಸುತ್ತದೆ ಎಂದು. ಸ್ವತಃ ಆಕ್ಷೇಪಿಸುವ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ಆದರೂ ಸಹ ಅಲ್ಲಾಹನ ಈ ಸುಧಾರಕನಿಗೆ ಸ್ವಯಂ ನಿರಾಕರಿಸುವುದಲ್ಲದೇ ಜನಸಾಮಾನ್ಯರನ್ನು ಸಹ ದಿಕ್ಕು ತಪ್ಪಿಸುತ್ತಿದ್ದಾರೆ. ದೈವಿಕ ಕುರುಹುಗಳೆಲ್ಲ ಪೂರ್ತಿಗೊಂಡವು. ಹಝ್ರತ್ ಪೈಗಂಗರ್(ಸ) ನುಡಿದ ಭವಿಷ್ಯವಾಣಿಗಳೆಲ್ಲ ಪೂರ್ತಿಗೊಂಡವು. ಆದರೂ ಅವರು ದುರಾದೃಷ್ಟವಶಾತ್ ಧ್ವನಿಗೂಡಿಸುತ್ತಿದ್ದಾರೆ. ಈ ಕಡೆ ನೊಡಬಯಸುವುದಿಲ್ಲ ಆಗಮಿಸಬೇಕಿದ್ದ ಮಸೀಹ್ ಮತ್ತು ಮಹದಿ ಆಗಮಿಸಿರುವರು. ಹಝುರತ್ ಪೈಗಂಬರ್(ಸ) ರ ಸತ್ಯಸಂಧ ದಾಸ ಇವರೇ ಆಗಿರುವರು. ಹಾಗೂ ಅವರನ್ನು ಬೈಅತ್ ಮಾಡುವುದು ಹಝ್ರತ್ ಪೈಗಂಬರ್(ಸ) ರ ಆದೇಶದ ಕಾರಣದಿಂದ ಅಗತ್ಯವಾಗಿದೆ ಎಂಬ ಸತ್ಯವನ್ನು ಇಂದು ಮುಸ್ಲಿಮರು ಮನವರಿಕೆ ಮಾಡಿದರೆ ಮುಸ್ಲಿಮರು ಲೋಕದಲ್ಲಿ ತಮ್ಮ ಶ್ರೇಷ್ಠತೆಯನ್ನು ಪುನಃ ಗಳಿಸುವರು. ಇಲ್ಲದಿದ್ದರೆ ಈಗ ಇರುವ ಸ್ಥಿತಿಯಲ್ಲೇ ಇರುವರು. ಅಲ್ಲಾಹನು ಅವರಿಗೆ ಸದ್ಬುದ್ಧಿಯನ್ನು ಮತ್ತು

ಅರಿವನ್ನು ನೀಡಲಿ. ರಂಝಾನ್ ಮಾಸದಲ್ಲಿ ಅಹ್ಮದಿಯರು ತಮಗಾಗಿ ಮತ್ತು ಎಲ್ಲ ವಿಧದ ಪಿತೂರಿಗಳಿಂದ ಜಮಾಅತ್ ಸುರಕ್ಷಿತವಾಗಿರಲು ದುಆ ಮಾಡುವುದರೊಂದಿಗೆ ಮುಸ್ಲಿಂ ಸಮುದಾಯಕ್ಕಾಗಿಯೂ ದುಆ ಮಾಡಬೇಕು. ಅಲ್ಲಾಹನು ಅವರ ಕಣ್ಣುಗಳನ್ನು ತೆರೆಯಲಿ. ಅವರನ್ನು ಅಂಧಕಾರದಿಂದ ಹೊರಗೆ ತರಲಿ. ಖತಮುನ್ನಬುವ್ವತನ್ನು ಸರಿಯಾಗಿ ಮನವರಿಕೆ ಮಾಡಿರುವರು, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಮಹದಿ (ಅ) ಮತ್ತು ಅವರ ಜಮಾಅತಿನವರೇ ಆಗಿರುವರು ಎಂಬ ಸಂಗತಿಯನ್ನು ಅವರು ಅರಿಯುವಂತಾಗಲಿ.

ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ದೇಶಕ್ಕಾಗಿ ದುಆ ಮಾಡಬೇಕು. ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಬೇಕು. ಪಿತೂರಿಗಾರರಿಂದ ದುಷ್ಟರಿಂದ ಮತ್ತು ಸ್ವಾರ್ಥ ನಾಯಕರಿಂದ ದೇಶವನ್ನು ಅಲ್ಲಾಹನು ಸಂರಕ್ಷಿಸಲಿ. ಅದೇ ರೀತಿಯಲ್ಲಿ ಬರ್ಕಿನೋ ಫಾಸೋದ ಅಹ್‌ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ಕೆಡುಕುಗಳಿಂದ ಸಂರಕ್ಷಿಸಲಿ. ಬಾಂಗ್ಲಾದೇಶದ ಅಹ್ಮದಿಯರನ್ನು ವಶೇಷವಾಗಿ ದುಆಗಳಲ್ಲಿ ನೆನಪಿಡಿರಿ. ಅಲ್ಲೂ ಪ್ರತಿ ಶುಕ್ರವಾರ ಏನಾದರೂ ಅಪಾಯ ಸಾಧ್ಯತೆಗಳು ಇರುತ್ತವೆ.

ಲೋಕದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಪ್ರತಿಯೊಂದು ಕೆಡುಕುಗಳಿಂದ ಪ್ರತಿಯೊಬ್ಬ ಅಹ್ಮದಿಯರನ್ನು ಸುರಕ್ಷಿತಗೊಳಿಸಲಿ ಮತ್ತು ದೃಢ ವಿಶ್ವಾಸವನ್ನು ವೃದ್ಧಿಸಲಿ.

ಲೋಕವು ನಾಶದಿಂದ ರಕ್ಷಣೆ ಪಡೆಯಲು ಕೂಡ ದುಆ ಮಾಡಿರಿ. ಇಂದಿನ ಸ್ಥಿತಿಯಲ್ಲಿ ಲೋಕವು ಬೆಂಕಿಯ ಅಂಚಿನಲ್ಲಿ ನಿಂತಿದೆ. ಬಾಹ್ಯವಾದ ಯುದ್ಧಗಳ ಕಡೆಗೂ ಧಾವಿಸುತ್ತಿದೆ. ಈ ಕಾರಣದಿಂದಲೂ ವಿನಾಶ ಉಂಟಾಗುವುದು. ಸಮ ಭಾವಪರವಾದ ಕೆಡುಕುಗಳು ಕೂಡ ಎಲ್ಲೆ ಮೀರಿವೆ. ಈ ಜನರು ಅಲ್ಲಾಹನನ್ನು ಬಿಟ್ಟು ಬಿಡುವುದರಿಂದ ಅಲ್ಲಾಹನ ಕೋಪವನ್ನು ವರ್ಧಿಸಲು ಕಾರಣಕರ್ತರಾಗದಿರಲಿ. ಅದರ ಕಾರಣದಿಂದ ಅಲ್ಲಾಹನ ಶಿಕ್ಷೆ ಅವರ ಮೇಲೆ ಇಳಿಯದಿರಲಿ.

ಅಲ್ಲಾಹನು ಅಹ್ಮದಿಯರನ್ನು ಎಲ್ಲ ಕೆಡುಕುಗಳಿಂದ ಸಂರಕ್ಷಿಸಲಿ. ಅಹ್ಮದಿಯರಿಗೆ ತಮ್ಮ ಕರ್ತವ್ಯ ಮತ್ತು ಹಕ್ಕನ್ನು ಈಡೇರಿಸಲು ಸೌಭಾಗ್ಯ ಲಭಿಸಲಿ. ಎಲ್ಲ ವಿಧದ ಆಪತ್ತುಗಳಿಂದ ರಕ್ಷಿಸುತ್ತಾ ತನ್ನ ಸಂರಕ್ಷಣೆ ಮತ್ತು ಅಭಯದಲ್ಲಿ ಇರಿಸಿ. ಆಮೀನ್. ನಾಳೆ 23 ಮಾರ್ಚ್‌ನಿಂದ ಅಲ್‌ಫಝುಲ್ ಇಂಟರ್‌ನ್ಯಾಷನಲ್ ವಾರ ಪತ್ರಿಕೆಯನ್ನು ಉರ್ದು ಬಲ್ಲವರು ಹೆಚ್ಚೆಚ್ಚಾಗಿ ಓದಬೇಕು. ಖರೀದಿಸಬೇಕು. ಸಬ್‌ಸ್ಕ್ರೈಬ್ ಮಾಡಬೇಕು. ಅದರಿಂದ ಫಲಾನುಭವಿಯಾಗುವ ಭಾಗ್ಯ ಅಲ್ಲಾಹನು ನಮಗೆಲ್ಲ ಅನುಗ್ರಹಿಸಲಿ. ಅಲ್‌ಫಝುಲ್‌ನಲ್ಲಿ ಬರೆಯುವವರಿಗೆ ಉತ್ತಮವಾಗಿ ಬರೆಯುವ ಭಾಗ್ಯ ದಯಪಾಲಿಸಲಿ.

**(ದಿನಪತ್ರಿಕೆ ಅಲ್‌ಫಝುಲ್ ಇಂಟರ್‌ನ್ಯಾಷನಲ್ 14 ಏಪ್ರಿಲ್ 2023 ಪುಟ 2 ರಿಂದ 7)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನಮಾಝ್‌ನಲ್ಲಿ ಸದಾ ಸೇರುವವರಾಗಬೇಕು. ಮಕ್ಕಳನ್ನು ಕರೆದುಕೊಂಡು ಮಸ್‌ಜಿದ್‌ಗಳಲ್ಲಿ ನಮಾಝ್ ನಿರ್ವಹಿಸಬೇಕು. ಆರಾಧನೆಗಳು ಮತ್ತು ಜನರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮೊದಲಿಗಿಂತ ಹೆಚ್ಚಾಗಿ ಶ್ರದ್ಧೆ ನೀಡಬೇಕು.

ನಾನು ಪಠಿಸಿದ ಪವಿತ್ರ ಕುರ್‌ಆನ್ ವಚನದಲ್ಲಿ ಹೆತ್ತವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಆಜ್ಞಾಪಿಸಲಾಗಿದೆ. ಆದುದರಿಂದ ತಂದೆ ತಾಯಂದಿರಿಗೆ ಸೇವೆ ಮಾಡುವುದರಲ್ಲಿ ಕೊರತೆ ತಲೆದೋರಬಾರದು. ಬಹುದೇವಾರಾಧನೆಗೆ ಸಂಬಂಧಿಸಿ ಹೊರತು ಅವರನ್ನು ಪೂರ್ಣವಾಗಿ ಅನುಸರಿಸಬೇಕೆಂದು ಆಜ್ಞಾಪಿಸಲಾಗಿದೆ. ಬಹುದೇವಾರಾಧನೆಗೆ ಸಂಬಂಧಿಸಿದಂತೆ ತಂದೆ ತಾಯಂದಿರೊಂದಿಗೆ ಅತ್ಯಂತ ವಿನಯದಿಂದ ಹೇಳಬೇಕು ಬಹುದೇವಾರಾಧನೆಗೆ ಸಂಬಂಧಿಸಿ ನಾನು ಅನುಸರಿಸಲಾರೆ ಎಂದು.

ಸಂಬಂಧಿಕರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಆಜ್ಞಾಪಿಸಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರು ತನಗೆ ಆಹಾರಕ್ಕೆ ಸಂಬಂಧಿಸಿ ವಿಶಾಲತೆಯನ್ನು ಇಚ್ಛಿಸುತ್ತಾನೋ ಯಾರು ತನ್ನ ಆಯುಸ್ಸಿನಲ್ಲಿ ಅನುಗ್ರಹವನ್ನು ಆಶಿಸುತ್ತಾನೋ ಯಾರು ತನ್ನ ಬಗ್ಗೆ ಉತ್ತಮ ಪ್ರಸ್ತಾಪ ಹೆಚ್ಚಾಗಬೇಕೆಂದು ಬಯಸುತ್ತಾನೋ ಅವನು ರಕ್ತ ಸಂಬಂಧಿಗಳೊಂದಿಗೆ ಉತ್ತಮ ಸಂಬಂಧ ಸ್ಥಾಪಿಸಬೇಕು. ಜನರು ತಮ್ಮ ಈದ್ ಸಂತೋಷಗಳಲ್ಲಿ ತಮ್ಮ ನೆರೆಹೊರೆಯವರನ್ನು ಸಹ ಭಾಗವಹಿಸುವಂತೆ ಮಾಡಬೇಕು. ನಿಮ್ಮೊಂದಿಗೆ ಅವರ ವರ್ತನೆ ಉತ್ತಮವಾಗಿಲ್ಲವಾದರೂ ನಾವು ಅವರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಹಾಗೆ ಮಾಡಬೇಕೆಂದು ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಆಜ್ಞಾಪಿಸಿರುವರು. ಅಲ್ಲಾಹನು ಅದಕ್ಕೋಸ್ಕರ ಪ್ರತಿಫಲ ನೀಡುತ್ತಾನೆ.

ಇಲ್ಲಿ ಒಂದು ವಿಷಯದ ಬಗ್ಗೆ ನಿಮ್ಮ ಗಮನ ಹರಿಸಲು ಇಚ್ಛಿಸುತ್ತೇನೆ. ಕೆಲವರು ತಮ್ಮ ಸಂಬಂಧಿಕರ ಮಾತುಗಳ ಕಾರಣದಿಂದ ತಮ್ಮ ಪತ್ನಿಯರನ್ನು ಆ ಸಂಬಂಧಿಕರನ್ನು ಭೇಟಿಯಾಗುವುದರಿಂದ ತಡೆಯುತ್ತಾರೆ. ಇದು ಅತ್ಯಂತ ತಿಳಿಗೇಡಿತನದ ವರ್ತನೆಯಾಗಿದೆ. ಅದರ ಬಗ್ಗೆ ಅಲ್ಲಾಹನು ತನ್ನ ಅತೃಪ್ತಿ ಸೂಚಿಸಿರುವನು. ಈ ವಿಷಯಕ್ಕೆ ಸಂಬಂಧಿಸಿ ವಿನಯದಿಂದ ವರ್ತಿಸಬೇಕು. ಪತ್ನಿಯ ಸಂಬಂಧಿಕರೊಂದಿಗೆ ಸಹ ಉತ್ತಮವಾಗಿ ವರ್ತಿಸಬೇಕು. ಅದಕ್ಕೆ ಸಹ ಅಲ್ಲಾಹನು ಪ್ರತಿಫಲ ನೀಡುವನು. ಯಾವ ಮನುಷ್ಯನು ಅಲ್ಲಾಹನಿಗೋಸ್ಕರ ಬಾಹ್ಯವಾಗಿ ತಗ್ಗಿದ ಭಾವನೆಯಿಂದ ಅನ್ಯನಿಗೆ ಸಲಾಮ್ ಹೇಳುತ್ತಾನೋ ರಾಜಿ ಮಾಡಿಕೊಳ್ಳಲು ಮುಂದಾಗುತ್ತಾನೋ ಅವನು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರನಾಗುತ್ತಾನೆ. ಈ ವಿಷಯದ ಬಗ್ಗೆ ಸಹ ಪ್ರತಿಯೊಬ್ಬ ಅಹ್ಮದಿ ವಿಶಿಷ್ಟವಾಗಿ ಶ್ರದ್ಧೆ ನೀಡುವುದು ಅವಶ್ಯಕವಾಗಿದೆ.

ಪತಿ ಪತ್ನಿಯರ ಪರಸ್ಪರ ಸಂಬಂಧಿಗಳ ಬಗ್ಗೆ ಸಹ ನಿಗಾವಹಿಸಬೇಕು. ಮನೆಗಳಲ್ಲಿ ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಮನಸ್ತಾಪಗಳು ಸಂಭವಿಸುತ್ತವೆ. ಅವುಗಳನ್ನು ದೂರ ಸರಿಸಲು ಪ್ರಯತ್ನಿಸಬೇಕಾಗಿದೆ. ಪತ್ನಿಯೊಂದಿಗೆ ಉತ್ತಮವಾಗಿ ಪುರುಷನು ವರ್ತಿಸಬೇಕೆಂಬ ಆಜ್ಞೆಯೊಂದಿಗೆ ಪತ್ನಿಯರೊಂದಿಗೆ ಸಹ ಹೀಗೆ ಆಜ್ಞಾಪಿಸಲಾಗಿದೆ: ಅವರು ತಮ್ಮೊಳಗೆ ಇದ್ದುದರಲ್ಲಿ ತೃಪ್ತಿ ಪಡುವ ಮನೋಭಾವ ಬೆಳೆಸಿಕೊಳ್ಳಬೇಕು ಮತ್ತು ತಮ್ಮ ಮನೆಗಳನ್ನು ಉತ್ತಮವಾಗಿ ನಿರ್ವಹಿಸಬೇಕು.

ಈದ್ ದಿನದ ಸಂತೋಷದಲ್ಲಿ ಅನಾಥರನ್ನೂ ನಿರ್ಗತಿಕರನ್ನೂ ಬಡವರನ್ನೂ ಗಮನಿಸಿ ಅವರಿಗೆ ಸಹಾಯ ನೀಡಬೇಕು. ಈದ್ ದಿನದಂದು ಅವರ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಬೇಕು. ಇದಕ್ಕೆ ಸಂಬಂಧಿಸಿ ನಮ್ಮ ಜಮಾಅತಿನಲ್ಲಿ ಸಹಾಯ ಮಾಡುವ ಕೆಲವು ಫಂಡ್‌ಗಳಿವೆ. ಶಾದಿ ಫಂಡ್ ಇದೆ. ರೋಗಿಗಳಿಗೆ ಸಹಾಯ ನೀಡುವ ಫಂಡ್ ಇದೆ. ವಿದ್ಯಾರ್ಥಿಗಳಿಗೆ ಸಹಾಯ ನೀಡುವ ಫಂಡ್ ಇದೆ. ಈ ಫಂಡ್‌ಗಳಿಗೆ ದೇಣಿಗೆ ನೀಡಲು ಸಾಧ್ಯವಿರುವವರು ದೇಣಿಗೆ ನೀಡಬೇಕು.

ಕೇವಲ ಈದ್ ದಿನದಂದು ಮಾತ್ರವಲ್ಲ ವರ್ಷದ ಪ್ರತಿಯೊಂದು ತಿಂಗಳಲ್ಲೂ ಅನಾಥರಿಗೆ, ನಿರ್ಗತಿಕರಿಗೆ, ಬಡವರಿಗೆ ಸಹಾಯ ನೀಡಬೇಕು. ಇದೇ ರೀತಿ ನೆರೆಹೊರೆಯವರ ಬಗ್ಗೆ ಸಹ ಶ್ರದ್ಧೆ ವಹಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದ್ದರು: ನೂರು ಮನೆಗಳಷ್ಟು ತನಕ ನಮ್ಮ ನೆರೆಹೊರೆಯವರಾಗಿದ್ದಾರೆ. ಆದುದರಿಂದ ನೆರೆಹೊರೆಯವರ ಹಕ್ಕುಗಳ ಬಗ್ಗೆ ಸಹ ಲಕ್ಷ್ಯ ನೀಡಬೇಕು. ಅವರಿಗೆ ಯಾವುದೇ ರೀತಿಯ ಕಷ್ಟ ನಮ್ಮಿಂದ ತಲಪಬಾರದು. ನಮ್ಮೊಂದಿಗೆ ಕೆಲಸ ಮಾಡುವವರ ನಮ್ಮ ಅಧೀನದಲ್ಲಿರುವವರ ಮತ್ತು ಬಲಹೀನರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಮತ್ತು ಅವರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಆಜ್ಞೆ ನೀಡಲಾಗಿದೆ.

ಈದ್ ದಿನದಂದು ಲೋಕದ ಬಗ್ಗೆ ಸಹ ಚಿಂತಿಸಬೇಕು. ಲೋಕಕ್ಕೋಸ್ಕರ ಸಹ ಪ್ರಾರ್ಥಿಸಬೇಕು. ನಾವು ನಮ್ಮ ಸಂತೋಷದಲ್ಲಿ ಮಾತ್ರ ತೃಪ್ತರಾಗಬಾರದು. ಲೋಕ ವಿನಾಶದ ಕಡೆಗೆ ಸಾಗುತ್ತಿದೆ. ಲೋಕವನ್ನು ರಕ್ಷಿಸುವುದು ಸಹ ನಮ್ಮ ಹೊಣೆಗಾರಿಕೆಯಾಗಿದೆ. ಲೋಕದಲ್ಲಿ ಹೀಗೆ ಸಂಭವಿಸುತ್ತಿರುವುದರ ಕಾರಣವೇನೆಂದರೆ ಲೋಕದಲ್ಲಿ ಜನರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಗಮನ ಹರಿಸಲ್ಪಡುವುದಿಲ್ಲ. ಲೋಕದಲ್ಲಿ ಪರಸ್ಪರ ಜನರ ಹಕ್ಕುಗಳನ್ನು ಈಡೇರಿಸಿ ಕೊಡಲ್ಪಡುತ್ತಿದ್ದರೆ ಇರಾಖ್, ಸಿರಿಯಾ, ಅಫ್‌ಘಾನಿಸ್ಥಾನ್ ಮೊದಲಾದ ದೇಶಗಳಲ್ಲಿ ವಿನಾಶಗಳನ್ನು ನಾವು ಕಾಣುತ್ತಿರಲಿಲ್ಲ. ಆಟಂ ಆಯುಧಗಳು ಬಳಸಲ್ಪಡಲಾರವು ಎಂಬ ಶುಭ ಪ್ರತೀಕ್ಷೆ ಮಾಡಲಾಗುತ್ತಿದೆ. ಅದರ ಬಗ್ಗೆ ಮಾತುಗಳು ಕೇಳಲಾಗುತ್ತಿದ್ದರೂ ಯಾರೂ ಅದರ ಬಗ್ಗೆ ಖಾತರಿ ನೀಡಲಾರರು. ಹೇಗಿದ್ದರೂ ಅದರ ಪರಿಣಾಮ ಅತ್ಯಂತ ಅಪಾಯಕರವಾಗುವುದು. ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಜನರ ಗಮನ ಹರಿಸುವುದು ಅಹ್ಮದಿಯರ ಹೊಣೆಗಾರಿಕೆಯಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ನಿರರ್ಥಕ ವಿಷಯಗಳನ್ನು ಪ್ರಸ್ತಾಪಿಸುತ್ತಾ ಸಮಯವನ್ನು ವ್ಯರ್ಥಗೊಳಿಸುವುದಕ್ಕೆ ಬದಲಾಗಿ ಜನರನ್ನು ದೇವನ ಕಡೆಗೆ ಕರೆಯುವ ಆಮಂತ್ರಣ ನೀಡಬೇಕು. ಅಲ್ಲಾಹನ ಆಜ್ಞೆಗಳ ಪಾಲನೆಯಿಂದಲೇ ಲೋಕದಲ್ಲಿ ಶಾಂತಿ ಸ್ಥಾಪಿತವಾಗುವುದು ಎಂದು ಜನರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಬೇಕು. ಈ ವಿಧಾನದಿಂದ ತಬ್ಲೀಗ್ ಮಾಡಲು ಹೊಸ ಮಾರ್ಗಗಳು ತೆರೆಯಲ್ಪಡುವುವು.

ಹುಝೂರ್ ಅಯ್ಯದಹುಲ್ಲಾಹು ತಆಲಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಒಂದು ಉದ್ಧರಣೆಯನ್ನು ಉಲ್ಲೇಖಿಸುತ್ತಾ ಹೇಳಿದರು: ಇಸ್ಲಾಮ್ ಮತ್ತು ಖುರ್‌ಆನ್ ಲೋಕದಲ್ಲಿ ಹರಡುವುದಾದರೆ ನಮ್ಮ ಈದ್‌ಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಭಾಗವಹಿಸುವರು.

ನಾವು ಅಲ್ಲಾಹನನ್ನು ಆರಾಧಿಸುವ ಹಕ್ಕನ್ನು ಈಡೇರಿಸುವವರಾಗಬೇಕು. ನಾವು ನಮ್ಮ ಮಕ್ಕಳೊಂದಿಗೆ ಸಹ ಹೇಳಬೇಕು ಅವರು ಆರಾಧನೆ ಮಾಡುವವರಾಗಬೇಕು ಎಂದು. ಅವರು ಜನರ ಹಕ್ಕುಗಳನ್ನು ಈಡೇರಿಸಿಕೊಡುವವರಾಗಬೇಕು. ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಲೋಕದಲ್ಲಿ ಹರಡಲು ಅವರು ಧಾರಾಳವಾಗಿ ಪ್ರಯತ್ನಿಸುವವರಾಗಬೇಕು. ಆತ್ಮದ ಈ ಮನೋಭಾವ ಪೀಳಿಗೆಗಳಿಂದ ಪೀಳಿಗೆಗಳಿಗೆ ವರ್ಗಾಯಿಸುವಂತಹದಾಗಬೇಕು. ಆತ್ಮದ ಈ ಮನೋಭಾವವನ್ನು ನಾವು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಲೋಕದಾದ್ಯಂತ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜ ಹಾರಾಡಲು ಪ್ರಾರಂಭವಾಗುವ ತನಕ ನಾವು ನೆಮ್ಮದಿಯಿಂದ ಕುಳಿತಿರಲಾರೆವು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯವನ್ನು ದಯಪಾಲಿಸುವವನಾಗಲಿ. ನಾವು ಅಂತಹ ಈದ್‌ಗಳ ದೃಶ್ಯಗಳನ್ನು ಕಾಣುವವರಾಗುವಂತೆ ಅಲ್ಲಾಹನು ಮಾಡಲಿ. ಅಂತಹ ಈದ್‌ಗಳನ್ನು ಗಳಿಸಲು ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಪ್ರಯತ್ನಗಳನ್ನೂ ಸಕ್ರಿಯಗೊಳಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸುವವನಾಗಲಿ.

ಹುಝೂರ್ ಅಯ್ಯದಹುಲ್ಲಾಹು ತಆಲಾ ಪ್ರಾರ್ಥಿಸುವ ಬಗ್ಗೆ ಅಪೇಕ್ಷಿಸುತ್ತಾ ಹೇಳಿದರು: ಬಂಧಿಸಲ್ಪಟ್ಟವರ ಬಿಡುಗಡೆ ಬಗ್ಗೆ, ಶಹೀದ್‌ಗಳ ಕುಟುಂಬಗಳಿಗೆ ಆರ್ಥಿಕ ನೆರವು ನೀಡಿದವರಿಗೋಸ್ಕರ ಪ್ರಾರ್ಥಿಸಿರಿ. ವಾಕಿಫೀನೆ ಝಿಂದಗಿ ತಮ್ಮ ಜೀವಿತವನ್ನು ಜಮಾಅತಿಗೋಸ್ಕರ ಅರ್ಪಿಸಿದವರ ಬಗ್ಗೆ ಸಹ ಪ್ರಾರ್ಥಿಸಿರಿ. ಅವರು ತಮ್ಮ ಅರ್ಪಣೆಯ ಮನೋಭಾವದಿಂದ ಉತ್ಸಾಹಭರಿತರಾಗಿ ಕಾರ್ಯನಿರತರಾಗಲು ಅಲ್ಲಾಹನು ಅವರಿಗೆ ಭಾಗ್ಯ ನೀಡಲಿ. ಕಾರ್ಯಕ್ಷೇತ್ರದಲ್ಲಿರುವ ಈ ಮುಬಲ್ಲಿಗರ ಹೃದಯದಲ್ಲಿ ಒಂದೇ ಒಂದು ಆಕಾಂಕ್ಷೆ ಇರಬೇಕು. ಲೋಕದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜವನ್ನು ನಾವು ಹಾರಿಸುವವರಾಗಬೇಕು. ಲೋಕವನ್ನು ಏಕದೇವ ವಿಶ್ವಾಸದ ಧ್ವಜದ ಕೆಳಗೆ ತರುವವರಾಗಬೇಕು. ಸರ್ವಶಕ್ತನಾದ ಅಲ್ಲಾಹನು ನಮ್ಮ ಸಾಮಾನ್ಯವಾದ ಪ್ರಯತ್ನಗಳಿಗೆ ಅಪರಿಮಿತವಾದ ಅನುಗ್ರಹ ನೀಡುವವನಾಗಲಿ. ನಾವು ಇಸ್ಲಾಮ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜಯವನ್ನು ಲೋಕದಲ್ಲಿ ಬೇಗನೆ ಕಾಣುವವರಾಗಲಿ.

ಖುತ್‌ಬ ಸಾನಿಯದ ನಂತರ ಹುಝೂರ್ ಅಯ್ಯದಹುಲ್ಲಾಹು ತಆಲಾ ಇಜ್ತಿಮಾಯಿ ದುಆ ಮಾಡಿಸಿದರು. ದುಆ ಮಾಡಿದ ನಂತರ ಲೋಕದಾದ್ಯಂತವಿರುವ ಅಹ್ಮದಿಯರಿಗೆ ಈದ್ ಶುಭಾಶಯಗಳನ್ನು ಕೋರುತ್ತಾ ಹೇಳಿದರು ಎಲ್ಲರಿಗೂ ಈದ್ ಮುಬಾರಕ್ ಆಗಲಿ.

*********

## ತಫ್ಸೀರೆ ಕಬೀರ್

**ಉಪವಾಸದ ಆಧ್ಯಾತ್ಮಿಕ ಪ್ರಯೋಜನವೆಂದರೆ ಮನುಷ್ಯನು ದೇವರೊಂದಿಗೆ ಉನ್ನತ ಮಟ್ಟದ ಸಂಪರ್ಕವನ್ನು ಪಡೆಯುತ್ತಾನೆ ಮತ್ತು ದೇವರೆ ಅವನ ರಕ್ಷಕನಾಗುತ್ತಾನೆ.**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಪವಾಸದ ಒಂದು ಆಧ್ಯಾತ್ಮಿಕ ಪ್ರಯೋಜನವೆಂದರೆ ಅದು ಸರ್ವಶಕ್ತನಾದ ಅಲ್ಲಾಹನನ್ನು ಅನುಕರಿಸುವಂತೆ ಮಾಡುತ್ತದೆ. ಸರ್ವಶಕ್ತನಾದ ಅಲ್ಲಾಹನ ಒಂದು ಗುಣವೆಂದರೆ ಅವನು ನಿದ್ರೆಯಿಂದ ಮುಕ್ತನಾಗಿದ್ದಾನೆ. ಮನುಷ್ಯನು ತನ್ನ ನಿದ್ರೆಯನ್ನು ಸಂಪೂರ್ಣವಾಗಿ ತ್ಯಜಿಸುವ ಮೂಲಕ ಇದನ್ನು ಮಾಡಲು ಸಾಧ್ಯವಿಲ್ಲ, ಆದರೆ ಉಪವಾಸದಲ್ಲಿ ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ಅವನು ತನ್ನ ನಿದ್ರೆಯ ಒಂದು ಭಾಗವನ್ನು ಅವಶ್ಯವಾಗಿ ತ್ಯಾಗ ಮಾಡುತ್ತಾನೆ ಸೆಹ್ರಿ ಮಾಡಲು ನಿದ್ರೆಯಿಂದ ಬೇಗನೆ ಎದ್ದು ತಹಜ್ಜುದ್ ನಮಾಝುನ್ನು ನಿರ್ವಹಿಸುತ್ತಾನೆ. ಉಪವಾಸ ಮಾಡದ ಮಹಿಳೆಯರು ಸೆಹ್ರಿ ವ್ಯವಸ್ಥೆ ಮಾಡಲು ಏಳುತ್ತಾರೆ. ಸ್ವಲ್ಪ ಸಮಯವನ್ನು ದುಆದಲ್ಲಿ ಮತ್ತು ಸ್ವಲ್ಪ ಸಮಯ ನಮಾಝ್ ನಿರ್ವಹಿಸುವುದರಲ್ಲಿ ಕಳೆಯುತ್ತಾರೆ ಹೀಗೆ ರಾತ್ರಿಯ ಕಡಿಮೆ ಭಾಗ ನಿದ್ರೆಗೆ ಉಳಿಯುತ್ತದೆ. ಮತ್ತು ಕೆಲಸ ಮಾಡುವವರಿಗೆ ಬೇಸಿಗೆಗಾಲದಲ್ಲಿ ನಿದ್ರೆಗೆ ಕೇವಲ ಎರಡು ಅಥವಾ ಮೂರು ಗಂಟೆಗಳು ಮಾತ್ರ ದೊರೆಯುತ್ತವೆ. ಈ ರೀತಿಯಾಗಿ ಮನುಷ್ಯ ಮತ್ತು ಅಲ್ಲಾಹನ ನಡುವೆ ಸಾಮ್ಯತೆ ಸೃಷ್ಟಿಯಾಗುತ್ತದೆ. ಅದೇ ರೀತಿ ಅಲ್ಲಾಹನು ತಿನ್ನುವುದರಿಂದ ಮತ್ತು ಕುಡಿಯುವುದರಿಂದ ಶುದ್ಧನಾಗಿದ್ದಾನೆ. ಮನುಷ್ಯನು ತಿನ್ನುವುದು ಮತ್ತು ಕುಡಿಯುವುದನ್ನು ಬಿಡಲು ಸಾಧ್ಯವಿಲ್ಲ, ಆದರೆ ಪವಿತ್ರ ಮಾಸ ರಮಝಾನಿನಲ್ಲಿ ಅವನು ಸರ್ವಶಕ್ತನಾದ ಅಲ್ಲಾಹನಿಗೆ ಒಂದು ರೀತಿಯ ಹೋಲಿಕೆಯನ್ನು ಸೃಷ್ಟಿಸುತ್ತಾನೆ. ಹೇಗೆ ಅಲ್ಲಾಹನಿಂದ ಒಳ್ಳೆಯದೇ ವ್ಯಕ್ತವಾಗುತ್ತದೋ ಅದೇ ರೀತಿ ಮನುಷ್ಯನಿಗೆ ಉಪವಾಸದಲ್ಲಿ ವಿಶೇಷವಾಗಿ ಒಳಿತು ಮಾಡಲು ಆದೇಶವಿದೆ. ರಸೂಲುಲ್ಲಾಹ್(ಸ) ನುಡಿದರು: ಯಾವ ವ್ಯಕ್ತಿ ಹಿಂದಿನಿಂದ ದೂಷಿಸುವುದು, ಚಾಡಿಹೇಳುವುದು ಮತ್ತು ದುರ್ವಚನ ಇತ್ಯಾದಿಗಳಿಂದ ದೂರವಿರುವುದಿಲ್ಲವೊ ಅಂತಹ ವ್ಯಕ್ತಿಯ ಉಪವಾಸ ಸಮ್ಮತವಾಗುವುದಿಲ್ಲ. ಅಂದರೆ ಮೂಮಿನ್ (ಭಯಭಕ್ತಿಯುಳ್ಳವ) ಒಳಿತೇ ವ್ಯಕ್ತವಾಗಲಿ ಎಂದು ಪ್ರಯತ್ನಿಸುತ್ತಾನೆ. ಅದೇ ರೀತಿ ಆತನು ಹಿಂದಿನಿಂದ ದೋಷಿಸುವುದರಿಂದ ಮತ್ತು ಜಗಳವನ್ನು ತಪ್ಪಿಸಲು ಪ್ರಯತ್ನಿಸುತ್ತಾನೆ. ಈ ರೀತಿಯಾಗಿ ಅವನು ಸರ್ವಶಕ್ತನಾದ ಅಲ್ಲಾಹನಿಗೆ ಸಾಧ್ಯವಾದಷ್ಟು ಹೋಲಿಕೆಯನ್ನು ಸೃಷ್ಟಿಸುತ್ತಾನೆ ಮತ್ತು ಎಲ್ಲವೂ ಅದರ ಹೋಲಿಕೆಯತ್ತ ಸಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಪರ್ಷಿಯನ್‌ನ ಒಂದು ಗಾದೆಮಾತಿದೆ **"ಕುನ್‌ದ್ ಹಮ್‌ಜಿನ್ಸ್ ಬಾಹಮ್ ಜಿನ್ಸ್ ಪರ್ವಾಝ್"** ಎಂದು.

ಹೀಗೆ ಉಪವಾಸದ ಒಂದು ಆಧ್ಯಾತ್ಮಿಕ ಪ್ರಯೋಜನವೆಂದರೆ ಮನುಷ್ಯನು ದೇವರೊಂದಿಗೆ ಉನ್ನತ ಮಟ್ಟದ ಸಂಪರ್ಕವನ್ನು ಪಡೆಯುತ್ತಾನೆ ಮತ್ತು ದೇವರೇ ಅವರ ರಕ್ಷಕನಾಗುತ್ತಾನೆ.

**(ತಫ್ಸೀರೆ ಕಬೀರ್, ಸಂಪುಟ-2, ಪುಟ-378, ಮುದ್ರಣ ಖಾದಿಯಾನ್ 2010)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್[ಅತಬಅ]ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್[ಸ] ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಸಂಘದ ಅಧ್ಯಕ್ಷೆ ಡಾ. ನುಸ್ರತ್ ಶರೀಫ್ ಸಾಹಿಬ, ಫಾಯಿಝರ್ (Pzizor) ನಲ್ಲಿ Fhermastical center ನ ವಿಜ್ಞಾನ ಪ್ರಾಂಶುಪಾಲರಾಗಿದ್ದಾರೆ.

ಪುರುಷ ಹಾಗೂ ಮಹಿಳಾ ಸಂಘದ ಸಂಯುಕ್ತ Vision ಬಗ್ಗೆ ತಿಳಿಸಿದರು. ನಾವು ಅಹ್ಮದಿಯಾ ಖಲೀಫರ ಅಭಿಲಾಷೆಗಳಂತೆ 100 ಪ್ರೊಫೆಸರ್ ಸೃಷ್ಟಿಸುವ ಗುರಿ ಹೊಂದಿದ್ದೇವೆ. ತಮ್ಮ ಈ ಪ್ರಯತ್ನವನ್ನು ಮುಂದುವರೆಸುತ್ತಾ ಡಾ. ನುಸ್ರತ್ ಸಾಹಿಬ್ ಎರಡೂ ಸಂಘಗಳ Official membership ನ ಪ್ರಸಕ್ತ Demographic data ಪ್ರಸ್ತುತಪಡಿಸಿ ಹೇಳಿದರು. ಕನಿಷ್ಠ ಹತ್ತು "ಅಬ್ದುಸ್ಸಲಾಂ" ಅರ್ಹತೆಯ ಅಭ್ಯರ್ಥಿಗಳು ಉಪಸ್ಥಿತರಿದ್ದಾರೆ.

ಆಗ ಹುಝೂರೆ ಅನ್ವರ್[ಅತಬಿಅ] ಹೇಳಿದರು. ಹಝ್‌ರತ್ ಖಲೀಫತುಲ್ ಮಸೀಹ್ ತೃತೀಯರು ಈ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. ಜಮಾಅತಿನ ಈ ಶತಮಾನದ ಒಳಗೆ ನಮ್ಮ ಬಳಿ ಇಂತಹ ವಿಜ್ಞಾನಿಗಳು ಇರಬೇಕಾಗಿದೆ. 1989 ರಿಂದ ಇಲ್ಲಿಯವರೆಗೆ 33 ವರ್ಷಗಳು ಸಂದಿವೆ. ಹುಝೂರೆ ಅನ್ವರ್ ಹೇಳಿದರು. ಮುಂದಿನ ಕೆಲವೇ ವರ್ಷಗಳಲ್ಲಿ ಕನಿಷ್ಠಪಕ್ಷ ಒಬ್ಬರು ಅಥವಾ ಇಬ್ಬರು ಅಬ್ದುಸ್ಸಲಾಂ ಆಗಬೇಕಾಗಿದೆ.

ಅನಂತರ ಕೆಳಗೆ ನಮೂದಿತ ಅಹ್ಮದಿ ವಿದ್ವಾಂಸರು ಸಂಕ್ಷಿಪ್ತವಾಗಿ ತಮ್ಮ ಸಂಶೋಧನಾ ವರದಿಯನ್ನು ಹುಝೂರೆ ಅನ್ವರ್ ಅವರ ಮುಂದೆ ಪ್ರಸ್ತುತಪಡಿಸಿದರು. ಮೊದಲು ಡಾ. ಅತ್‌ಹರ್ ನವೀದ್ ಮಲಿಕ್ ಸಾಹಿಬ್, ತಮ್ಮ Research ಮುಂದಿಟ್ಟರು. ಅವರು M.D. P.H.D. ಬ್ರೌನ್ ವಿಶ್ವವಿದ್ಯಾಲಯ ನಲ್ಲಿ Neomo surgery ಮತ್ತು Neono science ನ ಸಹಾಯಕ ಪ್ರೊಫೆಸರ್ ಆಗಿದ್ದಾರೆ. ಅವರು coma ಮತ್ತು ಮಿದುಳಿಗೆ ಸಂಬಂಧಿಸಿದ ರೋಗಗಳಲ್ಲಿ ಒಂದು ಅಸಾಮಾನ್ಯ ರೀತಿಯ ಫಲಕಾರಿ ಪರಿಣಾಮ ತರುವ ತನ್ನ ಸಂಶೋಧನೆಯ ಬಗ್ಗೆ ಹೇಳಿದರು. ಆಗ ಹುಝೂರೆ ಅನ್ವರ್ ಈ ಬಗ್ಗೆ ವಿಚಾರಿಸಿದಾಗ ಹೇಳಿದರು. ಇನ್ನೂ ಸಂಶೋಧನೆ ಜಾರಿಯಲ್ಲಿದೆ.

ಅದಾದ ನಂತರ ಡಾ. ಆಸಿಫ್ ಜಮೀಲ್ ಸಾಹಿಬ್ ಅವರು ತಮ್ಮ ಸಂಶೋಧನ ವರದಿ ನೀಡಿದರು. ಅವರು ಸಹ ಪಿ.ಹೆಚ್.ಡಿ ಆಗಿದ್ದಾರೆ. ಮತ್ತು ಹಾರ್‌ವರ್ಡ್ ಮೆಡಿಕಲ್ ಕಾಲೇಜಿನಲ್ಲಿ Instructor ಆಗಿದ್ದಾರೆ. ಅವರು ಮಾನಸಿಕ ಕಾಯಿಲೆಗಳ ಕಾರಣಗಳ ತಂತ್ರಗಳು (Brain stimulation Devices) ಯಿಂದ ನರಗಳ ಮತ್ತು ಮಾನಸಿಕ ಚಿಕಿತ್ಸೆಗಳ ಬಗ್ಗೆ ತಮ್ಮ ಸಂಶೋಧನೆ ಮುಂದಿಟ್ಟು ಹೇಳಿದರು. ಈ ಸಂಶೋಧನೆ ಇನ್ನು ಜಾರಿಯಲ್ಲಿದೆ.

ಅನಂತರ ಡಾ. ಅಬ್ದುನ್ನಸೀರ್ ಸಾಹಿಬ್ ತಮ್ಮ ಸಂಶೋಧನೆ ಬಗ್ಗೆ ತಿಳಿಸಿದರು. ಅವರು ಪಿ.ಹೆಚ್.ಡಿ ಆಗಿದ್ದಾರೆ ಮತ್ತು ಆಗಸ್ತಾ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಅವರು ತಿಳಿಸಿದರು. ಅವರು ಶರೀರದ ಎಲ್ಲ Cells ಗಳ ಬಗ್ಗೆ ವಿಶೇಷವಗಿ Cancern ನ cell ನ ಚಲನವಲನಗಳ ಹಿಂದಿನ ಮೂಲಭೂತ ಭೌತಿಕ ಕಾರಣಗಳನ್ನು ತಿಳಿಸಲು ಸಂಶೋಧನೆ ಮಾಡುತ್ತಿದ್ದಾರೆ. ಅವರ ಈ ಸಂಶೋಧನೆ ಈಗಾಗಲೇ ಲೋಕದ ಭೌತಿಕ ವಿಜ್ಞಾನದ ವಿಶೇಷ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಅವರ ಶೀರ್ಷಿಕೆ "ವಸ್ತುವಿನ ಸ್ವರೂಪ," ಎಂದಾಗಿದೆ.

ಅನಂತರ ಡಾ. ಫೈಝಾನ್ ಅಬ್ದುಲ್ಲ ಬಾಗ್ವರ್ ಸಾಹಿಬ್ ಅವರು M.D. P.HD. North Western University ಯ ಪ್ರೊಫೆಸರ್ ಮತ್ತು Chief of Pediatric surgery ಹಾಗೂ North wstern university shicago ನಲ್ಲಿ Canter for Globel surgery ಯ Director ಆಗಿದ್ದಾರೆ. ಅವರು ತಮ್ಮ ಸಂಶೋಧನೆಯ ಬಗ್ಗೆ ತಿಳಿಸುತ್ತ ಹೇಳಿದರು. ಅವರು ಮಕ್ಕಳಲ್ಲಿ (cour next energy) ಯ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿ (CEO) ಆಗಿದ್ದಾರೆ. ಅವರು ತಮ್ಮ ಕಂಪನಿಯ Electric natlery Technology ಯ ಬಗ್ಗೆ ತಿಳಿಸಿದರು. ಅದು Electric ಮೋಟಾರುಗಳಿಗೆ ಒಂದು ಸಾವಿರ ಕಿ.ಮೀ ಪ್ರಮಾಣದಲ್ಲಿ ಒಂದೇ ಸಲದ ಚಾರ್ಜ್‌ನ ಸಹಾಯ ಒದಗಿಸಿಕೊಡುತ್ತಿತ್ತು.

ಅನಂತರ ಅದೀಲ್ ಮಲಿಕ್ ಸಾಹಿಬ್ ಅವರು Clear step ing ನ Chief executive officer (CEO) ಆಗಿದ್ದರು. ಅವರು ಹೇಳಿದರು. ಅಗತ್ಯ ಉಳ್ಳವರ ಉಸ್ತುವಾರಿ ಸಲುವಾಗಿ Artificial intelligence ಬಳಸುತ್ತಿದ್ದಾರೆ ಮತ್ತು ಈ ಪೈಕಿ ಸಂಶೋಧನೆ ಮಾಡುತ್ತಿದ್ದಾರೆ.

ಅನಂತರ ಮಹಿಳಾ ವಿಜ್ಞಾನಿಗಳ ಪರವಾಗಿ ಡಾ. ಶಹ್ನಾಝ್ ಬಟ್ ಸಾಹಿಬ್ ನಮ್ಮ ಸಂಶೋಧನೆಯ ಕುರಿತು ಹೇಳಿದರು. ಅವರು P.H.D. ಆಗಿದ್ದಾರೆ. ಸೆಂಟ್ ಜೋಸೆಫ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿದ್ದಾರೆ ಮತ್ತು ಅದೇ ವಿಶ್ವವಿದ್ಯಾನಿಲಯದಲ್ಲಿ (Neuropsyche phraamodology lab, Director ಅಗಿದ್ದಾರೆ. ಅವರು ತಿಳಿಸಿದರು. ವಿವಿಧ ರೀತಿಯ ಮಾನಸಿಕ ರೋಗಗಳೆಲ್ಲ (Psychlogical Director) ನಾನಾ ಬಗೆಯ ಅಧ್ಯಯನ ನಡೆಸಲು ವಿವಿಧ ವೈಜ್ಞಾನಿಕ Model ಬಳಸುತ್ತಿದ್ದಾರೆ.

ಅನಂತರ ಓಲ್ವಿಯ ವಿಲಿಯಮ್ಸ್ ಬಾರ್ಬರ್ ಅವರು North Western University, Shicago ದಲ್ಲಿ ಪಿ.ಹೆಚ್.ಡಿ ಯ ಅಭ್ಯರ್ಥಿಯಾಗಿದ್ದಾರೆ. ಅವರು ತಮ್ಮ ಸಂಶೋಧನೆ ಪ್ರಕಾರ ಮನೆಯಲ್ಲಿರುವ ಕ್ರಿಮಿ ಜಂತುಗಳ ಮೇಲೆ Spraying disinfetant ಮಾಡುವುದರಿಂದ Antibiotic Assistant Bacteria ಸಮಸ್ಯೆ ಉದ್ಭವವಾಗುತ್ತದೆ ಎಂದು ತಿಳೀಸಿದರು.

ಅನಂತರ ನಾಯಿಲ ರಜಾಕ್ ಸಾಹಿಬಾ ಅವರು Yale ವಿಶ್ವವಿದ್ಯಾನಿಲಯದಲ್ಲಿ Early medieramean Religions ನಲ್ಲಿ P.H.D. ಅಭ್ಯರ್ಥಿಯಾಗಿದ್ದಾರೆ. ಅವರು ಹೇಳಿದರು. ಇಸ್ಲಾಮ್ ಧರ್ಮದ ಪ್ರಾರಂಭದಲ್ಲಿ ಫೆಸಿಫಿಕ್ ಸಮುದ್ರದ ಕ್ಷೇತ್ರಗಳ ಅಧ್ಯಯನ ಮಾಡಲು Archology ಯ ಹೊಸ ಹೊಸ ವಿಧಾನಗಳನ್ನು ಬಳಕೆ ಮಾಡಬಹುದಾಗಿದೆ.

ಹುಝೂರೆ ಅನ್ವರ್[ಅತಬಿಅ] ಅವರು ವಿಶೇಷವಾಗಿ ಆ ಸಂಶೋಧಕರಿಂದ ಅವರ ಕಾರ್ಯಗಳ ಫಲಿತಾಂಶದ ಬಗ್ಗೆ ಮತ್ತು ಸಮಾಜದ ಮೇಲೆ ಅದರಿಂದ ಆಗುವ ಪರಿಣಾಮಗಳ ಬಗ್ಗೆ ವಿಚಾರಿಸಿದರು.

ಕೊನೆಯಲ್ಲಿ ಸಂಘದವರು ಹುಝೂರೆ ಅನ್ವರ್ ಅವರಿಗೆ ಒಂದು ಆಸ್ಟ್ರೋ ಲ್ಯಾಬ್ ನೀಡಿದರು. ಅದು ಹಿಂದಿನ ಕಾಲಗಳಲ್ಲಿ ಖಗೋಳ ಮಾಪನಕ್ಕೆ ಬಳಸುತ್ತಿದ್ದ ಉಪಕರಣಗಳಾಗಿದ್ದವು. ಇದನ್ನು ಆರಂಭಿಕ ಮುಸ್ಲಿಂ ವಿಜ್ಞಾನಿಗಳು ಕಂಡುಹಿಡಿದಿದ್ದರು.

ಈ ಕಾರ್ಯಕ್ರಮವು ಬೆಳಿಗ್ಗೆ 8.05 ರವರೆಗೆ ಮುಂದುವರೆಯಿತು. ನಂತರ 8:30 ಕ್ಕೆ ಹುಝೂರೆ ಅನ್ವರ್ ಮಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳನ್ನು ಒಟ್ಟಿಗೆ ನಿರ್ವಹಿಸಿಕೊಟ್ಟರು ಪ್ರಾರ್ಥನೆಯ ನಂತರ ಹುಝೂರೆ ಅನ್ವರ್ (ಅಬಿಅ) ತಮ್ಮ ವಸತಿನಿಲಯಕ್ಕೆ ತೆರಳಿದರು.

**30 ಸೆಪ್ಟೆಂಬರ್ ಶುಕ್ರವಾರ**

ಹುಝೂರೆ ಅನ್ವರ್[ಅತಬಿಅ] ಮುಂಜಾನೆ 5:50 ಕ್ಕೆ ಮಸ್ಜಿದ್ ಫತಹ ಅಝೀಮ್ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್[ಅತಬಿಅ] ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರೆ ಅನ್ವರ್ ಕಚೇರಿ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು.

ಇಂದು ಪವಿತ್ರ ಜುಮುಅ ದಿನವಾಗಿತ್ತು. ಇಂದಿನ ಈ ದಿವಸವು ಹಲವು ವಿಧದಲ್ಲಿ ಒಂದು ಐತಿಹಾಸಿಕ ದಿನವಾಗಿತ್ತು. ಅದು ಅಹ್ಮದಿಅತ್ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯುವುದು. ಇಂದು ಹುಝೂರೆ ಅನ್ವರ್ ಅವರ ಖುತುಬ ಜುಮುಅ ಅಲ್ಲದೇ ಡಾ॥ ಅಲೆಕ್ಸಂಡರ್ ಡೂಯಿಯ zion ನಗರದಲ್ಲಿ ಮಸ್ಜಿದ್ ಫತಿಹ ಅಝೀಮ್‌ನ ಉದ್ಘಾಟನೆ ಆಗಬೇಕಿತ್ತು. ಅದಲ್ಲದೆ ಇದು ಈ ನಾಡಿನಲ್ಲಿ ಖಲೀಫತುಲ್ ಮಸೀಹ್ ಒಬ್ಬರ MTA International ಮೂಲಕ ಇಡೀ ಲೋಕದಲ್ಲಿ ನೇರ ಪ್ರಸಾರವಾಗುವ ಪ್ರಥಮ ಕುತುಬ ಜುಮುಅ ಆಗಿತ್ತು.

ಇದಕ್ಕಿಂತ ಮುಂಚೆ ಅಮೇರಿಕಾದ ಪೂರ್ವಭಾಗ ವಾಷಿಂಗ್‌ಟನ್ D.C. Harrisbury ಮತ್ತು ದಕ್ಷಿಣ ಕ್ಷೇತ್ರದ ಹ್ಯೂಸ್ಟನ್ ಮತ್ತು ಪಶ್ಚಿಮ ಕ್ಷೇತ್ರದ ಲಾಸ್‌ಏಂಜಲೀಸ್ ಇಂದ ಹುಝೂರೆ ಅನ್ವರ್ ಅವರ ಜುಮುಅ ಕುತುಬಗಳು MTA ಮೇಲೆ ಪ್ರಸಾರಗೊಂಡಿದೆ.

ಡಾ॥ ಡೂಯಿ ಹೇಳಿದರು. ನಾನು ನಿರ್ಮಿಸಿದ zion ನಗರದಿಂದ ಇಸ್ಲಾಂ ಧರ್ಮದ ಧ್ವನಿಯನ್ನು ಅಡಗಿಸಿಬಿಡುವೆನು. ಇಸ್ಲಾಂ ಧರ್ಮದ ಹೆಸರು ಸಹ ಹೇಳುವವರು ಯಾರೂ ಇರಲಿಕ್ಕಿಲ್ಲ.

ಇಂದು ಅಲ್ಲಾಹನ ಅನುಗ್ರಹದಿಂದ ಹಝ್‌ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಖಲೀಫರ ನಾಲಿಗೆಯಿಂದ ದೇವವಾಣಿ (ಇಲ್‌ಹಾಮ್) ಫತಹ ಅಝೀಮ್ ನಿಂದ, ಕೇವಲ ಡೂಯಿ ನಗರದಲ್ಲಿ ಮಾತ್ರ ಇಸ್ಲಾಮಿನ ಧ್ವನಿ ಮೊಳಗುತ್ತಿಲ್ಲ. ಬದಲು ಇಲ್ಲಿಂದ ಡೂಯಿಯ ದೇಶ ಅಮೇರಿಕಾದಲ್ಲಿಯೂ ಈ ಧ್ವನಿ ಮೊಳಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಧ್ವನಿ ಇಲ್ಲಿಂದ ಪ್ರಪಂಚದಾದ್ಯಂತ, ಇಡೀ ಲೋಕದಲ್ಲಿ ದೇಶ ದೇಶಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ, ಮನೆ ಮನೆಗಳಲ್ಲಿ ಆಲಿಸಲಾಗುತ್ತಿದೆ.

ಹಾಗೆ ಇಂದು ಈ ನಗರದ ಎಲ್ಲ ಭಾಗಗಳಿಂದ ಮತ್ತು ಇಲ್ಲಿಯ ಹಗಲಿರುಳಿನ ಕ್ಷಣ ಕ್ಷಣವು ಸಹ ಹಝುರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ಸಾಕ್ಷ್ಯವನ್ನು ಹೇಳುತ್ತಿದೆ.

**“ಸುಬ್‌ಹಾನಲ್ಲಾಹಿ ವ ಬಿಹಮ್‌ದಿಹೀ ಸುಬ್‌ಹಾಲ್ಲಾಹಿಲ್ ಅಝೀಮ್.”**

ಜುಮುಅ ನಮಾಝಿನಲ್ಲಿ Zion ಜಮಾಅತ್ ಅಲ್ಲದೇ ಅಮೇರಿಕಾದ ವಿವಿಧ ಇತರ ಜಮಾಅತುಗಳಿಂದ ಜಮಾಅತ್ ಬಾಂಧವರು ಬಹು ದೂರ ದೂರದ ಪ್ರಯಾಣಗಳನ್ನು ಮಾಡಿ ಇಲ್ಲಿ ಭಾಗವಹಿಸಲು ಬಂದಿರುತ್ತಾರೆ. ಇಲ್ಲಿ ಬಂದು ಸೇರಿರುವವರಲ್ಲಿ ಬಹುದೊಡ್ಡ ಸಂಖ್ಯೆ ಒಂದು ಸಾವಿರದಿಂದ ಎರಡು ಸಾವಿರದ ಮೈಲುಗಳ ದೂರದ ಪ್ರವಾಸಮಾಡಿ ಬಂದವರಾಗಿದ್ದರು. ಜಮಾಅತ್ ನಮಾಝಿನಲ್ಲಿ ಭಾಗವಹಿಸಿದವರ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚಾಗಿತ್ತು.

ಅಮೇರಿಕಾ ಅಲ್ಲದೆ, ಯು.ಕೆ. ಜರ್ಮನಿ, ಸ್ವೀಡನ್, ಬ್ರಾಝೀಲ್, ಗಿಯಾನ, ಸುರೇನಾಮ್, ಪಾಕಿಸ್ತಾನ, ಕಬಾಬೀರ, ಕೆನಾಡದಿಂದ ಜಮಾಅತಿನ ಪ್ರತಿನಿಧಿಗಳು ಮತ್ತು ಇತರ ಬಾಂಧವರು ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು.

ಕಾರ್ಯಕ್ರಮದನ್ವಯ 1 ಗಂಟೆಗೆ ಹುಝೂರೆ ಅನ್ವರ್[ಅತಬಿಅ] ಮಸ್ಜಿದ್ ಫತಹ ಅಝೀಮ್ ಆಗಮಿಸಿದ್ದರು ಮತ್ತು ಖುತುಬ ಜುಮುಅ ನೀಡಿದರು. (ಈ ಖುತುಬದ ಸಾರಾಂಶ, 6 ಅಕ್ಟೋಬರ್ 2022 ರ ಪ್ರಕಟಗೊಂಡಿದೆ ಅಖ್ಬಾರೆ ಬದರ್ ಸಂಚಿಕೆ ಸಂಖ್ಯೆ 40 ರಲ್ಲಿ ಅದರ ಸಂಪೂರ್ಣ ಭಾಗ ಅದೇ ಸಂಚಿಕೆಯಲ್ಲಿ ಪರಿಶೀಲಿಸಬಹುದು.)

ಹುಝೂರೆ ಅನ್ವರ್[ಅತಬಿಅ] ಅವರು ಈ ಖುತುಬ ಜುಮುಅ 1:50 ಗಂಟೆಯವರೆಗೆ ಜಾರಿಯಲ್ಲಿತ್ತು. ನಂತರ ಹುಝೂರೆ ಅನ್ವರ್ ಜುಮುಅ ನಮಾಝ್‌ನೊಂದಿಗೆ ಅಸರ್ ನಮಾಝ್ ಒಟ್ಟುಗೂಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

**(ಮುಂದುವರಿಯುವುದು)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್‌ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಪೆ ನೌ ವಿಭಾಗ ಭಾರತ)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್‌ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: “ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ.”

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 27 April 2023, Issue No. 17

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–16ರ ಉಳಿದ ಭಾಗ ಮುಂದುವರಿಸಲಾಗಿದೆ)*

### ಭೇಟಿ ಮಾಡುವವರ ಅನಿಸಿಕೆಗಳು

zion ಜಮಾಅತಿನ ಮಿತ್ರರೊಬ್ಬರಾದ ಉಸ್ಮಾನ್ M Bowe ಸಾಹಿಬ್ ಹೇಳುತ್ತಾರೆ. ಎರಡು ದಿನ ಮೊದಲು ನಾವು ಮಸೀದಿಯ ಹೊರಗೆ ನಿಂತುಕೊಂಡಿದ್ದೆವು. ಹುಝೂರ್ ಅನ್ವರ್ ಹೋಗುವಾಗ ನನ್ನತ್ತ ಮತ್ತು ನನ್ನ ಪುತ್ರನತ್ತ ಕೇವಲ ಒಂದು ಕ್ಷಣ ಮಾತ್ರಕ್ಕೆ ದೃಷ್ಟಿಹಾಯಿಸಿದ್ದರು. ಇಂದು ನಾವು ಕುಟುಂಬ ಸಮೇತ ಭೇಟಿ ಮಾಡಿದೆವು. ಹುಝೂರ್ ಅನ್ವರ್ ಹೇಳಿದರು. ನಾನು ನಿಮಗೆ ಎರಡು ದಿನಗಳ ಹಿಂದೆ ಮಸೀದಿಯ ಹೊರಗೆ ನೋಡಿದ್ದೆ. ನಾನು ಅಚ್ಚರಿಯೊಂದಿಗೆ ಈ ಸಣ್ಣದಾದ ವಿಷಯ ಹೇಗೆ ಹುಝೂರರ ನೆನಪಿನಲ್ಲಿ ಉಳಿದುಬಿಟ್ಟಿದೆ. ಮಹಿಳೆಯೊಬ್ಬಳು ಕಾಲಿದ್ ಬರ್‌ರ್ ಸಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಹುಝೂರ್ ನಾನು ನಿಮ್ಮನ್ನು ಭೇಟಿ ಮಾಡಲು ಇಚ್ಛಿಸುತ್ತೇನೆ. ನನಗೆ ಇಲ್ಲಿಯವರೆಗೆ ತಮ್ಮನ್ನು ಭೇಟಿ ಮಾಡಲಾಗಲಿಲ್ಲ. ತಾವು ಇಲ್ಲಿ Zion ಗೆ ಬರಬೇಕೆಂದು ನಾನು ಬಯಸುತ್ತೇನೆ. ಎಂದು ತುಂಬಾ ಸಮಯಗಳ ಹಿಂದೆ ನಾನು ಹುಝೂರರಿಗೆ ಪತ್ರ ಬರೆದಿದ್ದೆ. ಇಂದು ನನಗೆ ನಂಬಲೇ ಆಗುತ್ತಿಲ್ಲ. ಹುಝೂರ್ Zion ಗೆ ಬಂದಿದ್ದಾರೆ, ನಾನು ಎಷ್ಟು ಭಾಗ್ಯಶಾಲಿಯಾಗಿದ್ದೇನೆ. ಹುಝೂರರೊಂದಿಗೆ ಭೇಟಿಯಾಯಿತು.

ಕೋಲಂಬಸ್‌ನಿಂದ ಬಂದಿದ್ದ ಮಹಿಳೆಯೊಬ್ಬಳು ಹೇಳಿದರು. ಇಂದು ಭೇಟಿಯ ಕ್ಷಣವು ನನಗೆ ಒಂದು ವಿಶೇಷ ರೀತಿಯ ದೈವಿಕ ಕ್ಷಣವಾಗಿತ್ತು. ನಮಗೆ ನಿನ್ನೆಯವರೆಗೆ ತಿಳಿದಿರಲಿಲ್ಲ. ಇಂದು ಭೇಟಿಯಾಗಬಹುದೆಂದು. ನಮ್ಮ ಈ ಭೇಟಿ ಅಂತೂ ಒಂದು ಪವಾಡ ಸದೃಶ್ಯ ಭೇಟಿಯಾಗಿದೆ ಎಂದು ಹೇಳಿ ಅವರು ಅಳತೊಡಗಿದರು.

ಪಾಕಿಸ್ತಾನದಿಂದ ಬಂದಿದ್ದ ರಯ್ಯಾನ್ ಸಾಹಿಬ್ ಅವರು ಹೇಳಿದರು. ನಾನು ಈ ಅನುಭವವನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ನಾನು ಹುಝೂರ್ ರವರನ್ನು ನೋಡುತ್ತಲೇ ಈ ಲೋಕದಲ್ಲಿರಲಿಲ್ಲ. ನಾನೇನು ಮಾತನಾಡಲು ಯೋಚಿಸದ್ದೆ ಅದೆಲ್ಲ ಮರೆತು ಹೋಗಿತ್ತು.

ಶಿಕಾಗೋವಿನ ನೂಮಾನ್ ಅಹ್ಮದ್ ಸಾಹಿಬ್ ಹೇಳಿದರು. ಭೇಟಿಯ ಮೊದಲು ತನ್ನ ಸ್ಥಿತಿ ಹೇಗಿತ್ತೆಂದರೆ ಶ್ವಾಸ ತೆರೆಯಲು ಆಗುತ್ತಿರಲಿಲ್ಲ. ತುಂಬಾ ಗಾಬರಿ ಹಾಗೂ ಹೆದರಿಕೆ ಆವರಿಸಿತ್ತು. ಹುಝೂರರ ಕೋಣೆಗೆ ಪ್ರವೇಶ ಮಾಡಿ ಅವರ ಮುಖ ನೋಡುತ್ತಲೇ ಶ್ವಾಸ ತೆರೆಯುವಂತಾಯಿತು.

ಹಾಫೀಝ್ ಇಮ್ರಾನ್ ಅಹ್ಮದ್ ಸಾಹಿಬ್ ಅವರು ಮಿಂಯಾಮಿಯಿಂದ ಬಂದಿದ್ದರು. ಅವರು ಹೇಳಿದರು. ನಾನು ಕೃಷಿವಿಭಾಗದಲ್ಲಿ ಪ್ರೋಫಸೆಸರ್ ಆಗಿದ್ದೇನೆ, ಆಗ ಹುಝೂರ್ ಹೇಳಿದರು. ಕೃಷಿ ಒಂದು ವಿಶಾಲವಾದ ಕ್ಷೇತ್ರವಾಗಿದೆ. ನೀವು ವಿಶೇಷವಾಗಿ ಏನು ಕಲಿಸುತ್ತೀರಿ? ನಾನು ಹೇಳಿದೆ. Feed science (ಆಹಾರ ವಿಜ್ಞಾನ) ಕಲಿಸುತ್ತಿದ್ದೇನೆ.

Micheal corpenter ತಮ್ಮ ಅಹಿಸಿಕೆ ಹೀಗೆ ವ್ಯಕ್ತಪಡಿಸಿದರು: ನಾನು ಕೇವಲ ಮೂರು ತಿಂಗಳ ಹಿಂದೆ ಬೈಅತ್ ಮಾಡಿರುವ ನವ ಅಹ್ಮದಿಯಾಗಿದ್ದೇನೆ. ಅವರನ್ನು ಈ ರೀತಿ ಭೇಟಿಯಾಗಬಹುದು ಊಹಿಸಿಲಿಲ್ಲ. ಅವರನ್ನು ಭೇಟಿ ಮಾಡಿ ನನಗೆ ವಿಶ್ವಾಸವಾಯಿತು. ದಿಟವಾಗಿಯೂ ಖಲೀಫರನ್ನು ಅಲ್ಲಾಹನು ಸ್ವಯಂ ನಿಯುಕ್ತಗೊಳಿಸುತ್ತಾನೆ ಎಂದು.

ಶಿಕಾಗೋ ಜಮಾಅತಿನಿಂದ ಸಯ್ಯದ್ ಸಾಖಿಕ್ ಸಾಹಿಬ್ ಹೇಳುತ್ತಾರೆ. ನನ್ನ ಪತ್ನಿ ಭೇಟಿ ಮಾಡುವಾಗ ಅತ್ತುಬಿಟ್ಟಳು. ಪತ್ನಿಯು 16 ವರ್ಷ ಹಿಂದೆ ಬೈಅತ್ ಮಾಡಿದ್ದಳು ಅವರು ಆಫ್ಘಾನಿಸ್ತಾನದವಳು. ಉರ್ದು ಸರಿಯಾಗಿ ಬರುವುದಿಲ್ಲ ಎಂಬ ಚಿಂತೆ ಕಾಡುತ್ತಿತ್ತು. ಹುಝೂರ್ ಅನ್ವರ್ ಹೇಳಿದರು. ನಿಮ್ಮ ಉರ್ದು ಸರಿಯಾಗಿದೆ. ಮತ್ತು ನಾನು ನವ ಅಹ್ಮದಿ ಎಂದು ಭಾವಿಸಿಕೊಳ್ಳುವುದು ಬೇಡ. ನಾನು ಹುಟ್ಟು ಅಹ್ಮದಿ ಎಂದೇ ತಿಳಿಯಿರಿ ಮತ್ತು ಹುಟ್ಟು ಅಹ್ಮದಿಯಿಂದ ಯಾವ ನಿರೀಕ್ಷೆ ಇರುತ್ತದೆ ಅದರಂತೆಯೇ ನಡೆದುಕೊಳ್ಳಿರಿ.

ಇಮ್ರಾನ್ ಚೌಧರಿ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ಪ್ರೀತಿಯಿಂದ ನನ್ನ ಮಗಳಿಗೆ ಕರ್ಚಿಫ್ ಮತ್ತು ಚಾಕ್ಲೇಟ್ ನೀಡಿದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅಲ್ತಾಫ್ ಮುನೀಬ್ ಸಾಹಿಬ್ Binghamton ಜಮಾಅತಿನಿಂದ ಬಂದಿದ್ದರು. ಅವರ ಹೇಳುತ್ತಾರೆ ಇಂದು ನಾನು ಹುಝೂರ್ ರವರ ಭೇಟಿ ಮಾಡಿದಾಗ ಅವರು ನನ್ನ ಮಾತನ್ನು ಗಮನಕೊಟ್ಟು ಆಲಿಸಿದರು ಮತ್ತು ತಮ್ಮ ಸಲಹೆಗಳನ್ನು ನೀಡಿದರು. ನನಗೆ ಇನ್ನೇನು ಬೇಕಾಗಿತ್ತು. ನನಗೆ ಎಲ್ಲವು ದೊರಕಿದ ಅನುಭವವಾಯಿತು.

Oshkosh ಜಮಾಅತಿನಿಂದ ಬಂದ ಹಾಫಿಝ್ ಇನ್‌ಆಮುಲ್ ಹಖ್ ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಳ್ಳುತ್ತಾರೆ. ನಾನು ತುಂಬಾ ಚಿಂತೆಗೆ ಒಳಗಾಗಿದ್ದೆ. ಹುಝುರರನ್ನು ಭೇಟಿ ಮಾಡಿ ನನ್ನ ಎಲ್ಲ ಚಿಂತೆಗಳು ದೂರವಾದವು. ಹುಝೂರರ ಆಶೀರ್ವಾದ ನನ್ನ ಜೊತೆಯಲ್ಲಿದೆ.

ಭೇಟಿಯ ಈ ಕಾರ್ಯಕ್ರಮ 7 ಗಂಟೆ 30 ನಿಮಿಷಗಳವರೆಗೆ ನಡೆಯಿತು.

### ಅಹ್ಮದಿಯಾ ಮುಸ್ಲಿಂ ವಿಜ್ಞಾನಿಗಳ ಸಂಘದವರಿಂದ ಹುಝೂರ್ ಅನ್ವರ್ ಅವರ ಭೇಟಿ

ಈ ಭೇಟಿಯ ಕಾರ್ಯಕ್ರಮ ನಂತರ ಅಹ್ಮದಿಯಾ ಮುಸ್ಲಿಂ ವಿಜ್ಞಾನಿಗಳ ಸಂಘ ಹುಝೂರೆ ಅನ್ವರ್ ಅವರ ಜೊತೆ ಭೇಟಿ ಮಾಡುವ ಕಾರ್ಯಕ್ರಮವಿತ್ತು ಈ ಭೇಟಿಯ ವ್ಯವಸ್ಥೆ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು. ಹುಝೂರ್ ಅನ್ವರ್ ಆ ಸಭಾಂಗಣಕ್ಕೆ ಆಗಮಿಸಿದರು. ಈ ಕಾರ್ಯಕ್ರಮದ ಪ್ರಾರಂಭ ಖುರ್‌ಆನ್ ಪಠಣದಿಂದಾಯಿತು. ಅದನ್ನು ಮು. ಮುನೀಬ್ ಶರೀಫ್ ಸಾಬ್ ನೆರವೇರಿಸಿಕೊಟ್ಟರು. ಅನಂತರ ಡಾ. ಸುಹೇಲ್ ಹುಸೇನ್ ಸಹಿಬ್ ಆಫ್ ಸಿಲಿಕಾನ್‌ವೆಲಿ ತಮ್ಮ ಪರಿಚಯವನ್ನು ನೀಡಿದರು. ಡಾ. ಸಾಹಿಬ್ ಸ್ಟಿನ್‌ಫೋರ್ಡ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪ್ರೋಫೆಸರ್ ಆಗಿರುವರು. ಡಾ. ಸಾಹಿಬ್ ಹೇಳಿದರು. ಡಿಸೆಂಬರ್ 2019 ರಲ್ಲಿ ಅಹ್ಮದಿಯಾ ಮುಸ್ಲಿಂ Research contrance new ನಲ್ಲಿ ಹುಝೂರೆ ಅನ್ವರ್ ಭಾಷಣ ಮಾಡಿದ್ದರು. ತಮ್ಮ ಭಾಷಣದಿಂದಲೇ ಪ್ರೇರಣೆಗೊಂಡು ನಾವು ಈ ನಮ್ಮ ಪುರುಷರು ಮತ್ತು ಮಹಿಳಾ ಸದಸ್ಯರು ತನ್ನ ಗುರಿಗಳನ್ನು ಮುಂದಿಟ್ಟುಕೊಂಡೆವು. ನಮ್ಮ ಈ ಗುರಿ, ವಿಜ್ಞಾನ ಮತ್ತು ತಂತ್ರಜ್ಞಾನದ ಮುಂದಿನ ಇಸ್ಲಾಮಿಕ್ ಕಾಲದ ನೇತೃತ್ವ ಇನ್‌ಶಾಅಲ್ಲಾಹ್ ನಾವು ಅಹ್ಮದಿ ಮುಸ್ಲಿಂ ವಿಜ್ಞಾನಿಗಳು ವಹಿಸಿದ್ದೆವು. ನಾವು ನಮ್ಮ ವಾರ್ಷಿಕ ಕಾರ್ಯಕ್ರಮಗಳಲ್ಲಿ ಖುರ್‌ಆನ್ ಮತ್ತು ವಿಜ್ಞಾನ ವಿಷಯದಲ್ಲಿ Symposiums ಆಯೋಜಿಸುವುದು ನಮ್ಮ ಗುರಿಯಾಗಿದೆ ಎಂದು ಡಾ. ಸಾಹಿಬ್ ಹೇಳಿದರು.

ಹುಝೂರೆ ಅನ್ವರ್(ಅತಬಿಅ) ಅವರೊಡನೆ ಕೇಳಿದರು. ಇಲ್ಲಿ ಸೇರಿರುವ ಸದಸ್ಯರಲ್ಲಿ ಎಷ್ಟು ಜನರಿದ್ದೀರಿ ಮತ್ತು ಅವರಲ್ಲಿ ಎಷ್ಟು ಜನ P.H.D. ಮಾಡುವವರಿದ್ದಾರೆ? ಆಗ ಅವರು ಹೇಳಿದರು. ಇಲ್ಲಿ 46 ಪುರುಷರು ಮತ್ತು 37 ಸದಸ್ಯರು ಮಹಿಳೆಯರಿದ್ದಾರೆ. ಈ 83 ಸಂಖ್ಯೆಯಲ್ಲಿ 35 ಜನರು P.H.D. ಮಾಡಿದವರಾಗಿದ್ದಾರೆ. ಹಾಗೂ ಅಹ್ಮದಿ ಮಹಿಳಾ ವಿಜ್ಞಾನಿಗಳ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.